ಸಂಪುಟ 01 । ಸಂಚಿಕೆ 168 ಶನಿವಾರ 22 ಆಗಸ್ಟ್ 2026 । ಪುಟ 4 । ಬೆಲೆ-2 ರೂ.

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

ಮೋ: 9902277588, 9880707587, 9008787586   naijyadese@gmail.com

## ಈ ದಿನದ ವಿಶೇಷ

1)ವಿಶ್ವ ಸಸ್ಯ ಆಧಾರಿತ ಹಾಲಿನ ದಿನ (World Plant Milk Day) ? ಸೋಯಾ, ಬಾದಾಮಿ, ಓಟ್ಸ್, ತೆಂಗಿನಕಾಯಿ ಮುಂತಾದ ಸಸ್ಯ ಆಧಾರಿತ ಹಾಲಿನ ಬಗ್ಗೆ ಜಾಗೃತಿ ಮೂಡಿಸುವ ದಿನ.

2)ರಾಷ್ಟ್ರೀಯ ಟೂತ್ ಫೇರಿ ದಿನ (National Tooth Fairy Day) ? ಮಕ್ಕಳ ಹಲ್ಲಿನ ಆರೈಕೆಯ ಕುರಿತು ಜಾಗೃತಿ ಮೂಡಿಸುವ ದಿನ.

3)ರಾಷ್ಟ್ರೀಯ ದೇವದೂತನಾಗುವ ದಿನÀ (National Be an Angel Day) ? ಇತರರಿಗೆ ದಯೆ, ಸಹಾಯ ಮತ್ತು ಪ್ರೀತಿಯನ್ನು ತೋರಿಸಲು ಪ್ರೇರೇಪಿಸುವ ದಿನ.

4)ರಾಷ್ಟ್ರೀಯ ಬಾವೊ ದಿನ (National Bao Day) ? ಏಷ್ಯಾದ ಜನಪ್ರಿಯ ಬಾವೊ ಆಹಾರವನ್ನು ಆಚರಿಸುವ ದಿನ.

5)ರಾಷ್ಟ್ರೀಯ ಶಸ್ತ್ರಚಿಕಿತ್ಸಾ ಕ್ಯಾನ್ಸರ್ ತಜ್ಞರ ದಿನ ? ಕ್ಯಾನ್ಸರ್ ಚಿಕಿತ್ಸೆಯಲ್ಲಿ ಸೇವೆ ಸಲ್ಲಿಸುವ ಶಸ್ತ್ರಚಿಕಿತ್ಸಕರನ್ನು ಗೌರವಿಸುವ ದಿನ.

6) (International Day Commemorating the Victims of Acts of Violence Based on Religion or Belief) ಈ ದಿನವನ್ನು ಧರ್ಮ ಅಥವಾ ನಂಬಿಕೆಯ ಆಧಾರದ ಮೇಲೆ ನಡೆಯುವ ಹಿಂಸಾಚಾರದ ಸಂತ್ರಸ್ತರನ್ನು ಸ್ಮರಿಸಲು ಮತ್ತು ಅವರಿಗೆ ಗೌರವ ಸಲ್ಲಿಸಲು ಆಚರಿಸಲಾಗುತ್ತದೆ. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು 22 ಆಗಸ್ಟ್ ಅನ್ನು ಈ ಅಂತರರಾಷ್ಟ್ರೀಯ ದಿನವಾಗಿ ಘೋಷಿಸಿದೆ.

## ಸುಭಾಷಿತ

ಜೀವಂತವಾದ ಯಾವುದೇ ಭಾಷೆಯೂ ತಾನು ಕಡಿಮೆ ಯೋಗ್ಯತೆಯ ಭಾಷೆಯೆಂದು ಕುಗ್ಗಬಾರದು.

–ಮಾಸ್ತಿ ವೆಂಕಟೇಶ ಅಯ್ಯಂಗಾರ್

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಸನ್ ರೈಸ್ ಕಾಲೇಜ್ ನಿಂದ ಕಾರುಣ್ಯಾಶ್ರಮದಲ್ಲಿ ‘ವಿಶ್ವ ಹಿರಿಯ ನಾಗರಿಕ ದಿನಾಚರಣೆ ‘

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು – ಸನ್ ರೈಸ್ ಡಿ– ಫಾರ್ಮಸಿ , ನರ್ಸಿಂಗ್ ,ಪ್ಯಾರಾ ಮೆಡಿಕಲ್ ಕಾಲೇಜು ವತಿಯಿಂದ ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆ ಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ) ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಕಾಲೇಜಿನ ವಿದ್ಯಾರ್ಥಿಗಳಿಂದ ಆಶ್ರಯದಾತರುಗಳಿಗೆ ಹಲವಾರು ಮನರಂಜನಾ ಕಾರ್ಯಕ್ರಮಗಳ ಮೂಲಕ ಹಣ್ಣು ಹಂಪಲುಗಳನ್ನು ವಿತರಿಸಿ.**

ಆಶ್ರಮದಲ್ಲಿನ ಹಿರಿಯ ನಾಗ–ರಿಕರುಗಳಿಗೆ ಆತ್ಮಸ್ಥೈರ್ಯ ತುಂಬಿ ಪ್ರೀತಿಯನ್ನು ಹಂಚುವ ಮೂಲಕ ಅರ್ಥಪೂರ್ಣವಾಗಿ ವಿಶ್ವ ಹಿರಿಯ ನಾಗರಿಕ ದಿನಾಚರಣೆಯನ್ನು ನೆರವೇ–ರಿಸಲಾಯಿತು. ಕಾರ್ಯಕ್ರಮವನ್ನು ಸನ್ ರೈಸ್ ಗ್ರೂಪ್ ಆಫ್ ಇನ್ಸ್ಟಿಟ್ಯೂಟ್ ಪ್ರಾಚಾರ್ಯರಾದ ಲಾಜರ್ ಸೀರಿಲ್ ಅವರು ವೇದಿಕೆಯ ಮೇಲಿದ್ದ ಗಣ್ಯರು ಹಾಗೂ ಹಿರಿಯ ನಾಗರಿಕರೊಂದಿಗೆ ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ಹಿರಿಯ ಸಮಾಜ ಸೇವಕರುಗಳಾದ ವೇ. ಮೂ. ಶರಣಯ್ಯ ಆದ–ಾಪುರ. ಶಿವಪುತ್ರಯ್ಯ ನಿವೃತ್ತ ಕಂಟ್ರೋಲರ್ ಕೆ. ಎಸ್. ಆರ್. ಟಿ. ಸಿ. ಹಾಗೂ ಅಮರೇಗೌಡ ಆದಾಪುರ ಇವರುಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮವನ್ನು ಉದ್ಘಾಟಿಸಿ ಪ್ರಾಚಾರ್ಯರಾದ ಲಾಜರ್ ಸೀರಿಲ್ ಮಾತನಾಡಿ ನಮ್ಮ ಸಂಸ್ಥೆಯಿಂದ ಪ್ರತಿ ವರ್ಷವೂ ಕೂಡ ಕಾರುಣ್ಯಾಶ್ರಮದಲ್ಲಿ ಆಚರಣೆ ಮಾಡುವ ವಿಶ್ವ ಹಿರಿಯ ನಾಗರಿಕ ದಿನಾಚರಣೆಯಲ್ಲಿ ನಮ್ಮ ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳು ದೇವಾ ತರಬೇತಿಯನ್ನು ಪಡೆದುಕೊಂಡಂತಾಗುತ್ತದೆ.

ಸಮಾಜದಲ್ಲಿ ಹೆತ್ತವರನ್ನು ಹಿರಿಯರನ್ನು ಗೌರವದಿಂದ ಕಂಡಾಗ ಮಾತ್ರ ನೀವು ಪಡೆದ ಶಿಕ್ಷಣ ಸಾರ್ಥಕವಾಗುತ್ತದೆ. ಇಂದಿನ ಈ ದಿನ ಹಿರಿಯರನ್ನು ಗೌರವಿಸಿ ಅವರ ಸಾಧನೆಗಳನ್ನು ನೆನಪಿಸಿಕೊಂಡು ಅವರಿಗೆ ಗೌರವ ಅರ್ಪಿಸುವ ವಿಶೇಷ ದಿನ ಇದಾಗಿದೆ ಇಂತಹ ಕಾರ್ಯಕ್ರಮವು ಕಾರುಣ್ಯ ಕುಟುಂಬದಲ್ಲಿ ಹಿರಿಯರ ನೋವುಗಳನ್ನು ಮರೆಸಿ ನಾವು ನೀವೆಲ್ಲರೂ ಹಂಚುವ ಪ್ರೀತಿಗೆ ಕಾರಣವಾಗುತ್ತದೆ. ಬರೀ ನಮಗೆ ಜನ್ಮ ಜೀವ ಜೀವನ ಕೊಟ್ಟವರಷ್ಟೇ ತಂದೆ ತಾಯಿಗಳು ಎಂದುಕೊಳ್ಳದೆ ಸಮಾಜದಲ್ಲಿರುವ ಎಲ್ಲಾ ಹಿರಿಯರು ಕೂಡ ನಮ್ಮ ತಂದೆ ತಾಯಿಗಳ ಸಮಾನರು ಅಂದುಕೊಂಡು ಅವರಿಗೆ ಗೌರವ ನೀಡಿದಾಗ ಮಾತ್ರ ನಮ್ಮ ಭಾರತೀಯ ಸಂಸ್ಕೃತಿ, ಸಂಸ್ಕಾರ ಉಳಿಯಲು ಸಾಧ್ಯ ಎಂದು ಮಾತನಾಡಿ ಎಲ್ಲಾ ಹಿರಿಯರಿಗಳಿಗೆ ಹಣ್ಣು ಹಂಪಲುಗಳನ್ನು ವಿತರಿಸಿ ಆಶೀರ್ವಾದ ಪಡೆದುಕೊಂಡರು.




ನಂತರ ಆಶ್ರಮದ ಒಡೆಯರಾದ ಡಾ. ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಕರಡಕಲ್ ಮಾತನಾಡಿ ನಮಗೆ ಜನ್ಮ ನೀಡಿದ ತಂದೆ–ತಾಯಿಗಳ ಕನಸನ್ನು ನನಸು ಮಾಡಿದಾಗ ಮಾತ್ರ ನಾವೆಲ್ಲರೂ ಭಾರತ ದೇಶದ ಉತ್ತಮ ಪ್ರಜೆಗಳಾಗಲು ಸಾಧ್ಯ ನಾವು ಈ ಸಂಸ್ಥೆಯನ್ನು ಹಲವಾರು ಹಿರಿಯ ನಾಗ–ರಿಕ ಸೇವಾ ತಿಳುವಳಿಕೆಗಳ ಅಭಿಯಾನಗಳ ನಡೆಸುತ್ತಿದ್ದೇವೆ. ನಮ್ಮ ದೇಶದ ನಾಡಿನ ಎಲ್ಲಾ ಗುರುಹಿರಿಯರ ಮಾರ್ಗದರ್ಶನದಂತೆ ಕಾರುಣ್ಯ ಆಶ್ರಮದ ಸೇವಾ ಕಾರ್ಯ ನೆರವೇರುತ್ತಿದೆ.

ನಮ್ಮ ಸನ್ ರೈಸ್ ಕಾಲೇಜಿನ ಸಂಸ್ಥಾಪಕರಾದ ಇರ್ಫಾನ್ ಅತ್ತಾರ್ ಅವರು ಹಲವಾರು ಸಮಾಜಪರ ಕಾರ್ಯಗಳನ್ನು ಮಾಡುವ ಮೂಲಕ ನಮ್ಮೆಲ್ಲರಿಗೆ ಮಾರ್ಗದರ್ಶಕರಾಗಿದ್ದಾರೆ. ಅವರ ಶಿಕ್ಷಣ ಸಂಸ್ಕಾರ ಸಂಸ್ಕೃತಿಯ ಸಂದೇಶದೊಂದಿಗೆ ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವನೆಯನ್ನು ಬೀರುತ್ತಿದೆ. ಇಂದಿನ ಈ ಕಾರ್ಯಕ್ರಮದಲ್ಲಿ ಆಶ್ರಮದಲ್ಲಿರುವಂತ ಎಲ್ಲ ಹಿರಿಯರು ಕೂಡ ವಿಶೇಷ ಹಬ್ಬದಂತೆ ಆಚರಣೆ ಮಾಡಿರುವುದು ವಿಶ್ವ ಹಿರಿಯ ನಾಗರಿಕ ದಿನಾಚರಣೆಗೆ ಸಂಪೂರ್ಣ ಅರ್ಥ ಕಲ್ಪಿಸಿ ಕೊಟ್ಟಿದೆ. ಪ್ರತಿ ವರ್ಷವೂ ಕೂಡ ಈ ರೀತಿ ಈ ದಿನವನ್ನು ಆಚರಣೆ ಮಾಡುವ ಸನ್ ರೈಸ್ ಸಂಸ್ಥೆಗೆ ನಮ್ಮ ಕಾರುಣ್ಯ ಕುಟುಂಬದ ವತಿಯಿಂದ ಹೃದಯಪೂರ್ವಕ ಹೃತ್ಪೂರ್ವಕ ಧನ್ಯವಾದಗಳು ಎಂದು ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಡಾ. ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಕರಡಕಲ್ ಸದಸ್ಯರು ಕಾರುಣ್ಯ ಆಶ್ರಮ. ಸುಜಾತ ಹಿರೇಮಠ ಸದಸ್ಯರು ಕಾರುಣ್ಯ ಆಶ್ರಮ. ಇರ್ಷಾದ್ ಅತ್ತಾರ್ ಕಾರ್ಯದರ್ಶಿಗಳು ಸನ್ ರೈಸ್ ಗ್ರೂಪ್ ಆಫ್ ಇನ್ಸ್ಟಿಟ್ಯೂಟ್. ಆಸುಪಾಷಾ ಉಪನ್ಯಾಸಕರು. ಶೋಭಾ ಉಪನ್ಯಾಸಕರು.ಶರಣಪ್ಪ ನಾಯಕ ಕಸಬಾ ಲಿಂಗಸೂಗೂರ.

ಮಹೇಶ ಬಾರಕೇರ ಕಸಬಾ ಲಿಂಗಸೂಗೂರು.ಹಾಗೂ ಡಾ. ಚನ್ನಬಸವ ಸ್ವಾಮಿ ಹಿರೇಮಠ ಕಾರ್ಯಾಧ್ಯಕ್ಷರು ಕಾರುಣ್ಯ ಆಶ್ರಮ. ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ. ಮರಿಯಪ್ಪ. ಜ್ಯೋತಿ.ಶರಣು ಸ್ವಾಮಿ. ಬಸವ ಸ್ವಾಮಿ. ಹಾಗೂ ಸನ್ ರೈಸ್ ಕಾಲೇಜಿನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು

### ಸೇವೆಯ ಸೂರ್ಯ ಇರ್ಫಾನ್ ಅತ್ತಾರ್

ಸನ್ ರೈಸ್ ಕಾಲೇಜಿನ ಜ್ಞಾನಜ್ಯೋತಿ ಬೆಳಗಿಸಿ,
ಅನೇಕ ಯುವಕರ ಬಾಳಿಗೆ ದಾರಿ ತೋರಿಸಿ,
ಸಮಾಜದ ನೋವಿಗೆ ಸ್ಪಂದಿಸುವ ಹೃದಯವಾಗಿ,
ಸೇವೆಯ ಪಥದಲ್ಲಿ ಸಾಗುವರು ಇರ್ಫಾನ್ ಅತ್ತಾರ್.
ಬಡವರ ಕಣ್ಣೀರ ಒರೆಸುವ ಕರುಣೆಯ ಕೈ,
ನೊಂದವರ ಬದುಕಿಗೆ ನೀಡುವ ಹೊಸ ಭರವಸೆ,
ಶಿಕ್ಷಣದ ಜೊತೆಗೆ ಮಾನವೀಯತೆ ಕಲಿಸುವ
ಮಹನೀಯ, ಸಮಾಜ ಸೇವೆಯಲ್ಲಿ ಸದಾ
ಮುಂಚೂಣಿಯ ನಾಯಕ!

– ಡಾ ಚನ್ನಬಸವ ಸ್ವಾಮಿ ಹಿರೇಮಠ




## ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಚಂದಪ್ಪ ಹಕ್ಕಿ ಆಯ್ಕೆ

❑ ನೈಜ್ಯ ದೆಸೆ ನ್ಯೂಸ್

**ಕುಷ್ಟಗಿ: ಪಟ್ಟಣದ ಮಹರ್ಷಿ ವಾಲ್ಮೀಕಿ ಭವನದಲ್ಲಿ ಚುಟುಕು ಸಾಹಿತ್ಯ ಪರಿಷತ್ ತಾಲೂಕು ಘಟಕದ ವತಿಯಿಂದ ಪ್ರಥಮ ಚುಟುಕು ಸಾಹಿತ್ಯ ಸಮ್ಮೇಳನ ಆಯೋಜಿಸುವ ಕುರಿತು ಪೂರ್ವಭಾವಿ ಸಭೆ ನಡೆಯಿತು.**

ಸಭೆಯ ಅಧ್ಯಕ್ಷತೆಯನ್ನು ಚುಟುಕು ಸಾಹಿತ್ಯ ಪರಿಷತ್ ತಾಲೂಕು ಘಟಕದ ಅಧ್ಯಕ್ಷ ಮಹೇಶ ಹಡಪದ್ ವಹಿಸಿದ್ದರು. ಪ್ರಥಮ ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಸಾಹಿತಿ ಚಂದಪ್ಪ ಹಕ್ಕಿ ಅವರನ್ನು ಆಯ್ಕೆ ಮಾಡಲಾಯಿತು. ಅವರ ಹೆಸರನ್ನು ವಿಶ್ವನಾಥ್ ಅಂಬ್ಲಿಕೊಪ್ಪಮಠ ಪ್ರಸ್ತಾಪಿಸಿದರೆ, ರವೀಂದ್ರ ಬಾಕಳೆ ಅನುಮೋದಿಸಿದರು. ಸಭೆಯಲ್ಲಿದ್ದ ಎಲ್ಲರೂ ಸರ್ವಾನುಮತದಿಂದ ಚಪ್ಪಾಳೆ ತಟ್ಟುವ ಮೂಲಕ ಆಯ್ಕೆಯನ್ನು ಬೆಂಬಲಿಸಿದರು.



ಸಮ್ಮೇಳನವನ್ನು ಸೆಪ್ಟೆಂಬರ್ 26ರಂದು ಶನಿವಾರ ಶ್ರೀ ಬುತ್ತಿ ಬಸವೇಶ್ವರ ಸಭಾಂಗಣ, ಕುಷ್ಟಗಿಯಲ್ಲಿ ನಡೆಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ತಾಲೂಕಿನ ಪ್ರಥಮ ಚುಟುಕು ಸಾಹಿತ್ಯ ಸಮ್ಮೇಳನ ಇದಾಗಿರುವ ಹಿನ್ನೆಲೆಯಲ್ಲಿ ತಾಲೂಕಿನ ಎಲ್ಲ ಸಾಹಿತಿಗಳು, ಕನ್ನಡಾಭಿಮಾನಿಗಳು ಹಾಗೂ ನಾಗ–ರಿಕ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಪ್ರತಿನಿಧಿಗಳಾಗಿ ಸಹಕಾರ ನೀಡುವ ಮೂಲಕ ಸಮ್ಮೇಳನವನ್ನು ಯಶಸ್ವಿಗೊಳಿಸಬೇಕು ಎಂದು ಪರಿಷತ್ ಪದಾಧಿಕಾರಿಗಳು ಮನವಿ ಮಾಡಿದರು. ದೊಡ್ಡಪ್ಪ ಕೈಲವಾಡಗಿ, ಹನುಮೇಶ ಗುಮಗೇರಿ, ಉಮೇಶ್ ಹಿರೇಮಠ್, ರವೀಂದ್ರ ಬಾಕಳೆ ಹಾಗೂ ಶಿವಾಜಿ ಹಡಪದ್ ಮಾತನಾಡಿ ಸಮ್ಮೇಳನದ ಕು–ರಿತು ಸಲಹೆ?ಸೂಚನೆಗಳನ್ನು ನೀಡಿದರು. ಈ ಸಂದರ್ಭದಲ್ಲಿ ವೆಂಕಟೇಶ್ ಚಾಗಿ, ಹನುಮಂತಪ್ಪ ಪುರತಗೇರಿ, ಸಂಗಮೇಶ್ ಇಣಚಿ, ಅನಿಲ್ ಕುಮಾರ್, ಸಂಗಮೇಶ್ ಲೂಥಿಮಠ, ಬುಡ್ನೇಸಾಬ ಕಲಾದಗಿ, ನಿಂಗಪ್ಪ ಸಜ್ಜನ್ ಸೇರಿದಂತೆ ಹಲವರು ಉಪಸ್ಥಿತ–ರಿದ್ದರು. ಚುಟುಕು ಸಾಹಿತ್ಯ ಪರಿಷತ್ ಪ್ರಧಾನ ಕಾರ್ಯದರ್ಶಿ ವಿಶ್ವನಾಥ್ ಅಂಬ್ಲಿಕೊಪ್ಪಮಠ ಸಭೆಯನ್ನು ನಿರ್ವಹಿಸಿದರು.

## ವ್ಯಸನ ಮುಕ್ತ ಪ್ರತಿಜ್ಞಾ ಮಹಾ ಅಭಿಯಾನ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಯುವಕರಲ್ಲಿ ವ್ಯಸನಮುಕ್ತ ಜೀವನದ ಕುರಿತು ಜಾಗೃತಿ ಮೂಡಿಸಲು ವೀರಶೈವ ವಿದ್ಯಾವರ್ಧಕ ಸಂಘದ ಖಾಸ್ಗತೇಶ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯದಲ್ಲಿ ಎನ್. ಎಸ್.ಎಸ್.ವೈ.ಆರ್.ಸಿ, ಎನ್.ಸಿ.ಸಿ. ಹಾಗೂ ರೋವರ್ಸ ಮತ್ತು ರೇಂಜರ್ಸ ಘಟಕ ಮತ್ತು ಸ್ಥಳೀಯ ಪ್ರಜಾಪಿತ ಬ್ರಹ್ಮ ಕುಮಾರಿ ಈಶ್ವರಿಯ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಗುರುವಾರ ವ್ಯಸನ ಮುಕ್ತ ಪ್ರತಿಜ್ಞಾ ಮಹಾ ಅಭಿಯಾನ ನಡೆಸಲಾಯಿತು.**

ಉಪನ್ಯಾಸಕರಾಗಿ ಆಗಮಿಸಿದ್ದ ರಾಜಯೋಗಿ ಬಿ.ಕೆ. ದೇವರಾಜ ಅವರು ಮಾತನಾಡಿ ವ್ಯಸನವು ವ್ಯಕ್ತಿಯ ಆರೋಗ್ಯವನ್ನು ಮಾತ್ರವಲ್ಲದೆ ಕುಟುಂಬದ ನೆಮ್ಮದಿ,



ಆರ್ಥಿಕ ಸ್ಥಿತಿ, ಶಿಕ್ಷಣ, ಉದ್ಯೋಗ ಮತ್ತು ಸಾಮಾಜಿಕ ಸಂಬಂಧಗಳ ಮೇಲೂ ಗಂಭೀರ ಪರಿಣಾಮ ಬೀರುತ್ತದೆ. ಯುವಕರು ದೇಶದ ಭವಿಷ್ಯದ ಶಕ್ತಿಯಾಗಿರುವುದರಿಂದ ಅವರನ್ನು ವ್ಯಸನಗಳಿಂದ ದೂರವಿಡುವುದು ಪ್ರತಿಯೊಬ್ಬರ ಜವಾಬ್ದಾ–ರಿಯಾಗಿದೆ ಎಂದು ಹೇಳಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಚಾರ್ಯ ದಯಾನಂದ ಮೂಗಡ್ಲಿಮಠ ರವರು ಮಾತನಾಡಿ ವ್ಯಸನದಿಂದ ದೂರವಿರಲು ಉತ್ತಮ ಸ್ನೇಹಿತರನ್ನು ಆಯ್ಕೆ ಮಾಡಿಕೊಳ್ಳುವುದು, ಕ್ರೀಡೆ, ಯೋಗ, ಧ್ಯಾನ, ಸಾಂಸ್ಕೃತಿಕ ಚಟುವಟಿಕೆಗಳು ಹಾಗೂ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದು ಅಗತ್ಯ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಅಭಿಯಾನದ ಪ್ರಮುಖ ಭಾಗವಾಗಿ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಒಟ್ಟಾಗಿ ವ್ಯಸನ ಮುಕ್ತ ಪ್ರತಿಜ್ಞೆ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ, ರೇಂಜರ್ಸ ಅಧಿಕಾರಿ ಸುಜಾತ ಚಲವಾದಿ, ವೈ ಆರ್ ಸಿ, ಹಾಗೂ ರೋವರ್ಸ ಅಧಿಕಾರಿ ಅಶೋಕ ರಾಠೋಡ, ಎನ್. ಎಸ್. ಎಸ್. ಅಧಿಕಾರಿ ಕಾಶಿನಾಥ ಬಿ ದೇಸಾಯಿ ಮತ್ತು ಲಲಿತಾ ಗೌಡರ, ಐ.ಕ್ಯೂ.ಎ.ಸಿ. ಸಂಯೋಜಕಿ ದೀಪಾ ಮಾಳಗೆ, ಎನ್.ಸಿ.ಸಿ. ಅಧಿಕಾರಿ ರಾಘವೇಂದ್ರ ಮಿಸ್ಕಿನ, ಅತಿಥಿಗಳಾದ ಬ್ರಹ್ಮಕುಮಾರಿ ಪ್ರೇಮಾ, ಪೂರ್ಣಿಮಾ, ಸಿ. ಲಿಂಗಪ್ಪ, ಮಲ್ಲಿಕಾರ್ಜುನ ಹಿಪ್ಪರಗಿ ಹಾಗೂ ಮಹಾವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಫೋಟೊಗ್ರಾಫರ್ಸ್, ವಿಡಿಯೊಗ್ರಾಫರ್‌ಗಳಿಗೆ ಕಾರ್ಮಿಕ ಇಲಾಖೆ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಿ : ಅಧ್ಯಕ್ಷ ಜಗದೀಶಗೌಡ

❑ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ: ಸರಕಾರ ಫೋಟೊಗ್ರಾಫಸ್ ,ವಿಡಿಯೊಗ್ರಾಫರ್‌ಗಳಿಗೆ ಕಾರ್ಮಿಕ ಇಲಾಖೆ ಎಲ್ಲ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದು ತಾಲೂಕು ಫೋಟೊಗ್ರಾಫರ್ಸ್ ಮತ್ತು ವಿಡಿಯೊಗ್ರಾಫರ್ಸ್ ಅಸೋಸಿಯೇಷನ್‌ನ ಪದಾಧಿಕಾರಿಗಳು ಹಾಗೂ ಅಧ್ಯಕ್ಷರಾದ ಜಗದೀಶಗೌಡ ಅವರು ಸರ್ಕಾರದಕ್ಕೆ ಪ್ರಮುಖವಾಗಿ ಒತ್ತಾಯಿಸಿದ್ದರು.**

ಪಟ್ಟಣದ ಎಪಿಎಂಸಿ ಆವರಣದಲ್ಲಿ ನಡೆದ ವಿಶ್ವ ಛಾಯಾಗ್ರಾಹಕ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, 'ಕಾರ್ಮಿಕ ಇಲಾಖೆಯ ವತಿಯಿಂದ ಸಿಗುವ ಆರೋಗ್ಯ ವಿಮೆ, ಅಪಘಾತ ವಿಮೆ, ಮತ್ತು ಪಿಂಚಣಿ ಯೋಜನೆಗಳು ಎಲ್ಲರಿಗೂ ತಲುಪಬೇಕು. ವೃತ್ತಿಪರ ಛಾಯಾಗ್ರಾಹಕರಿಗೆ ಸರ್ಕಾರದಿಂದ ಅಧಿಕೃತ ಸ್ಮಾರ್ಟ್ ಕಾರ್ಡ್ ಅಥವಾ ಲೇಬರ್




ಕಾರ್ಡ್ ವಿತರಿಸಲು ಅಭಿಯಾನ ಹಮ್ಮಿಕೊಳ್ಳಬೇಕು. ಸೀಸನ್ ಇಲ್ಲದ ಸಮಯದಲ್ಲಿ ಅಥವಾ ತುರ್ತು ಸಂದರ್ಭಗಳಲ್ಲಿ ಸಾಲ ಸೌಲಭ್ಯ ಹಾಗೂ ಆರ್ಥಿಕ ನೆರವು ಒದಗಿಸಬೇಕು. ವಸತಿ ಸೌಲಭ್ಯ ಸೇರಿದಂತೆ ಇತರೆ ಸವಲತ್ತುಗಳನ್ನು ನೀಡವ ನಿಟ್ಟಿನಲ್ಲಿ ಶಾಸಕರು, ಆಡಳಿತ ಪುರಸಭೆ ಆಸಕ್ತಿವಹಿಸಬೇಕು," ಎಂದರು.

ಇದಕ್ಕೂ ಮೊದಲು ಉದ್ಭವ ಗಣಪತಿ ದೇಗುಲದಿಂದ ಎಪಿಎಂಸಿವರೆಗೆ ಮೆರವಣಿಗೆ ನಡೆಯಿತು. ಸಂಘದ ಸದಸ್ಯರಿಗೆ ಗುರುತಿನ ಚೀಟಿ ವಿತರಿಸಲಾಯಿತು. ಸಂಘದ ಪದಾಧಿ ಕಾರಿಗಳಾದ ಜಿ.ಎಚ್.ಶಶಿಧರ, ಎಸ್. ಶ್ರೀನಿವಾಸರೆಡ್ಡಿ, ಇಲಿಯಾಜ್, ಶಿವಕುಮಾರ್, ಎಮ್ಮಿಗನೂರು ಬಸವರಾಜ, ಎಚ್. ಎಸ್.ವೀರೇಶ್, ತಿಪ್ಪೇಸ್ವಾಮಿ, ವೀರನಗೌಡ, ಪ್ರಮೋದ್ ಕುಮಾರ್ ಸೇರಿ ತಾಲೂಕಿನ ಫೋಟೊಗ್ರಾಫರ್, ವಿಡಿಯೊಗ್ರಾಫರ್ ಸೇರಿದಂತೆ ಇತರರಿದ್ದರು.

## ಜನಪದ ಹಾಡಿನ ಮೂಲಕ ವಿಬಿಜಿ–ರಾಮ್ ಜೀ ಯೋಜನೆ ಜಾಗೃತಿ

❑ ನೈಜ್ಯ ದೆಸೆ ನ್ಯೂಸ್

**ಕುಷ್ಟಗಿ: ತಾಲೂಕಿನ ಕಂದಕೂರ ಗ್ರಾಮದ ಕೆರಿಯಲ್ಲಿ ನಡೆಯುತ್ತಿರುವ ವಿಬಿಜಿ?ರಾಮ್ ಜೀ ಯೋಜನೆಯಡಿ ಉದ್ಯೋಗ ಖಾತ್ರಿ ಕಾಮಗಾರಿಯಲ್ಲಿ ಜನಪದ ಕಲಾವಿದ ವಾ.ಹ. ಯಕ್ಕರನಾಳ ಅವರು ಜನಪದ ಹಾಡುಗಳ ಮೂಲಕ ಕೂಲಿಕಾರರಲ್ಲಿ ಜಾಗೃತಿ ಮೂಡಿಸಿದರು.**

ವಿಬಿಜಿರಾಮ್ ಜೀ ಯೋಜನೆಯಡಿ ಪ್ರತಿ ಕುಟುಂಬಕ್ಕೆ ವರ್ಷಕ್ಕೆ 125 ಮಾನವ ದಿನಗಳ ಉದ್ಯೋಗ ಕಲ್ಪಿಸಲು ಅವಕಾಶವಿದ್ದು, ದಿನಕ್ಕೆ ?382 ಕೂಲಿ ನೀಡಲಾಗುತ್ತಿದೆ. ಇದರಿಂದ ಗ್ರಾಮೀಣ ಕೂಲಿಕಾರರಿಗೆ ನಿರಂತರವಾಗಿ



ಕೆಲಸ ದೊರೆಯುವಂತಾಗಿದೆ. ಕಾಮಗಾರಿ ಸ್ಥಳದಲ್ಲಿ ವಾ.ಹ. ಯಕ್ಕರನಾಳ ಅವರು ಸೋಬಾನ ಪದ, ಜೋಗುಳ ಪದ ಸೇರಿದಂತೆ ವಿವಿಧ ಜನಪದ ಹಾಡುಗಳನ್ನು ಹಾಡಿ ಕಾರ್ಮಿಕರನ್ನು ರಂಜಿಸುವುದರ ಜತೆಗೆ ಯೋಜನೆಯ ಮಹತ್ವವನ್ನು ತಿಳಿಸಿದರು. ಅವರ ಹಾಡಿಗೆ ಮಹಿಳೆಯರು ಸಿಳ್ಳೆ ಹಾಕಿ, ನಗುತ್ತಾ ಖುಷಿಪಟ್ಟು ಕಾರ್ಯಕ್ರಮದಲ್ಲಿ ಉತ್ಸಾಹದಿಂದ ಪಾಲ್ಗೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ವಾ.ಹ. ಯಕ್ಕರನಾಳ ಅವರು, ಸರ್ಕಾರ ನೀಡಿರುವ ಯೋಜನೆಗಳನ್ನು ಗ್ರಾಮಸ್ಥರು ಸಮರ್ಪಕವಾಗಿ ಬಳಸಿಕೊಳ್ಳಬೇಕು. ಉದ್ಯೋಗ ಖಾತ್ರಿ ಯೋಜನೆಯಿಂದ ಗ್ರಾಮದಲ್ಲಿಯೇ ಕೆಲಸ ದೊರೆಯುವುದ–ರಿಂದ ಕೂಲಿಗಾಗಿ ಬೇರೆ ಊರುಗಳಿಗೆ ತೆರಳಿ ದುಡಿಯುವ ಪರಿಸ್ಥಿತಿ ತಪ್ಪುತ್ತದೆ. ಹೀಗಾಗಿ ಗ್ರಾಮಸ್ಥರು ಇಂತಹ ಯೋಜನೆಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

## ಸಾಹಿತ್ಯ ಸಿಂಚನ

### ದೇವದಾಸಿ

ದೇವರ ಹೆಸರಲ್ಲಿ ದಾಸಿಯಾದಳು
ಬದುಕಿನ ಬೆಳಕನ್ನೇ ಕಳೆದುಕೊಂಡಳು
ಹೂವಿನಂತೆ ಅರಳಬೇಕಾದ ಬಾಲ್ಯ
ಮುಡಿಯಾಗದೆ ಮಣ್ಣು ಪಾಲಾಯಿತು

ದೇವಾಲಯದ ಗಂಟೆಯ ನಾದದಲ್ಲಿ
ಅವಳ ಕಣ್ಣೀರಿನ ಶಬ್ದ ಯಾರಿಗೂ ಕೇಳಲಿಲ್ಲ
ಆರತಿ ಬೆಳಕಿನಲ್ಲಿ ಕಂಗೊಳಿಸಿದಳು
ಆದ್ರೆ ಬದುಕಿನ ಕತ್ತಲಲ್ಲಿ ಒಂಟಿಯಾದಳು

ಸಮಾಜ ಅವಳನ್ನು ದೇವತೆ ಎಂದಿತು
ಆದರೆ ಮನುಷ್ಯಳಾಗಿ ಕಾಣಲಿಲ್ಲ
ಹಾಡು ಕುಣಿತ ಕಲಿಸಿದರು
ಆದ್ರೆ ಸ್ವತಂತ್ರ ಬದುಕು ಕೊಡಲಿಲ್ಲ

ಕನಕ ದಾಸ "ಕುಲ ಕುಲವೆಂದು" ಕೇಳಿದ
ಬಸವಣ್ಣ "ಕಾಯಕವೇ ಕೈಲಾಸ" ಎಂದ
ಆದ್ರೆ ಇವಳ ಕುಲ ಯಾವುದು?
ಇವಳ ಕಾಯಕ ಯಾವುದು ?

ಈಗ ಕಾನೂನು ಅವಳ ಕೈ ಹಿಡಿದಿದೆ
ಶಿಕ್ಷಣ ಅವಳಿಗೆ ದಾರಿ ತೋರಿದೆ
ದೇವದಾಸಿಯಲ್ಲ, ದೇವತೆಯ ಮಗಳು ಅವಳು
ಸ್ವಾಭಿಮಾನದ ಬದುಕು ಅವಳ ಹಕ್ಕು

ಮೂಢನಂಬಿಕೆ ಸುಟ್ಟು ಬೂದಿ ಮಾಡೋಣ
ಹೆಣ್ಣುಮಕ್ಕಳಿಗೆ ಗೌರವ ಕೊಡೋಣ
ದೇವರು ಇರೋದು ಗುಡಿಯಲ್ಲಿ ಅಲ್ಲ
ಪ್ರತಿ ಜೀವದ ಉಸಿರಿನಲ್ಲಿ

ಮತ್ತೊಬ್ಬ ದೇವದಾಸಿ ಹುಟ್ಟದಿರಲಿ
ಇದೇ ನನ್ನ ಪ್ರಾರ್ಥನೆ,
ಇದೇ ನನ್ನ ಕವನ

ಎಸ್. ದುರಗಪ್ಪ. ಕುಷ್ಟಗಿ.
ಬರಹಗಾರ ಹಾಗೂ ಕನ್ನಡ ಚಲನಚಿತ್ರ ಸಹ-ನಟ. 8095727664

## ದಿನ್ನೆಭಾವಿ ಗ್ರಾಮದಲ್ಲಿ ಈದ್ ಮಿಲಾದ್‌ಗಣೇಶ ಹಬ್ಬದ ಹಿನ್ನೆಲೆಯಲ್ಲಿ ಶಾಂತಿ ಸಭೆ

ನೈಜ್ಯ ದೆಸೆ ನ್ಯೂಸ್



**ಮಸ್ಕಿ: ಮುಂಬರುವ ಈದ್ ಮಿಲಾದ್ ಹಾಗೂ ಗಣೇಶ ಹಬ್ಬಗಳ ಹಿನ್ನೆಲೆಯಲ್ಲಿ ಮಸ್ಕಿ ಪೊಲೀಸ್ ಠಾಣಾ ವ್ಯಾಪ್ತಿಯ ದಿನ್ನೆಭಾವಿ ಗ್ರಾಮದಲ್ಲಿ ಪೊಲೀಸ್ ಇಲಾಖೆಯ ವತಿಯಿಂದ ಶಾಂತಿ ಸಭೆ ನಡೆಸಲಾಯಿತು.**

ಮಸ್ಕಿ ಪೊಲೀಸ್ ಠಾಣೆಯ ಪಿ.ಎಸ್.ಐ. ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಗ್ರಾಮದ ಸಾರ್ವಜನಿಕರು, ಮುಖಂಡರು ಹಾಗೂ ವಿವಿಧ ಸಮುದಾಯಗಳ ಪ್ರಮುಖರು ಭಾಗವಹಿಸಿದ್ದರು. ಹಬ್ಬಗಳ ಸಂದರ್ಭದಲ್ಲಿ ಗ್ರಾಮದಲ್ಲಿ ಶಾಂತಿ, ಸೌಹಾರ್ದತೆ ಹಾಗೂ ಸಹಬಾಳ್ವೆಯನ್ನು ಕಾಪಾಡಿಕೊಳ್ಳುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಈದ್ ಮಿಲಾದ್ ಮತ್ತು ಗಣೇಶ ಹಬ್ಬಗಳನ್ನು ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡದೆ, ಪರಸ್ಪರ ಗೌರವ ಹಾಗೂ ಸಹಕಾರದೊಂದಿಗೆ ಶಾಂತಿಯುತವಾಗಿ ಆಚ-ರಿಸುವಂತೆ ಪಿ.ಎಸ್.ಐ. ಅವರು ಸಾರ್ವಜನಿಕ-ರಿಗೆ ಸಲಹೆ ನೀಡಿದರು. ಹಬ್ಬದ ಸಂದರ್ಭದಲ್ಲಿ ಮೆರವಣಿಗೆ, ಧಾರ್ಮಿಕ ಕಾರ್ಯಕ್ರಮಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ರೀತಿಯ ಗೊಂದಲ ಅಥವಾ ಕಾನೂನುಬಾಹಿರ ಚಟುವಟಿಕೆಗಳಿಗೆ ಅವಕಾಶ ನೀಡಬಾರದು. ಸಾಮಾಜಿಕ ಜಾಲತಾಣಗಳಲ್ಲಿ ಪ್ರಚೋದನಕಾರಿ ಸಂದೇಶಗಳು, ವದಂತಿಗಳು ಅಥವಾ ಯಾವುದೇ ಸಮುದಾಯದ ಭಾವನೆಗಳಿಗೆ ಧಕ್ಕೆ ತರುವಂತಹ ವಿಷಯಗಳನ್ನು ಹಂಚಿಕೊಳ್ಳದಂತೆ ಸಾರ್ವಜನಿಕರಿಗೆ ಸೂಚಿಸಲಾಯಿತು.

ಗ್ರಾಮದಲ್ಲಿ ಯಾವುದೇ ಅನುಮಾನಾಸ್ಪದ ಚಟುವಟಿಕೆಗಳು ಕಂಡುಬಂದಲ್ಲಿ ತಕ್ಷಣ ಪೊಲೀಸರ ಗಮನಕ್ಕೆ ತರುವಂತೆ ಮನವಿ ಮಾಡಲಾಯಿತು. ಪೊಲೀಸ್ ಇಲಾಖೆ ಹಾಗೂ ಸಾರ್ವಜನಿಕರ ಸಹಕಾರದಿಂದ ಹಬ್ಬಗಳನ್ನು ಶಾಂತಿ ಮತ್ತು ಸೌಹಾರ್ದತೆಯಿಂದ ಆಚರಿಸೋಣ ಎಂದು ಪಿ.ಎಸ್.ಐ. ಅವರು ಕರೆ ನೀಡಿದರು. ಸಭೆಯಲ್ಲಿ ಗ್ರಾಮದ ಮುಖಂಡರು, ಹಿರಿಯರು, ಯುವಕರು, ಸಾರ್ವಜನಿಕರು ಹಾಗೂ ಪೊಲೀಸ್ ಸಿಬ್ಬಂದಿ ಉಪಸ್ಥಿತರಿದ್ದರು.

## ವರ್ಷಕ್ಕೆ 125 ಮಾನವ ದಿನಗಳ ಉದ್ಯೋಗಕ್ಕೆ ಅವಕಾಶ

ನೈಜ್ಯ ದೆಸೆ ನ್ಯೂಸ್

**ಕುಷ್ಟಗಿ: ವಿಕಸಿತ ಭಾರತ?ಗ್ಯಾರಂಟಿ ಫಾರ್ ರೋಜಗಾರ್ ಅಂಡ್ ಆಜೀವಿಕ ಮಿಷನ್ (ಗ್ರಾಮೀಣ) (ವಿಬಿಜಿ?ರಾಮ್ ಜೀ) ಯೋಜನೆಯಡಿ ಪ್ರತಿ ಕುಟುಂಬಕ್ಕೆ ವರ್ಷಕ್ಕೆ 125 ಮಾನವ ದಿನಗಳ ಉದ್ಯೋಗ ಕಲ್ಪಿಸಲು ಅವಕಾಶವಿದ್ದು, ಕೂಲಿಕಾರ ಕುಟುಂಬಗಳು ಯೋಜನೆಯ ಸದುಪಯೋಗ ಪಡೆದು ಆರ್ಥಿಕವಾಗಿ ಸದೃಢರಾಗಬೇಕು ಎಂದು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಅಮರೇಶ್ ಹೇಳಿದರು.**

ತಾಲೂಕಿನ ಹಾಬಲಕಟ್ಟಿ ಹಾಗೂ ಮಾಲಗಿತ್ತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಾದಿಮನಾಳ ಗ್ರಾಮದ ಕೆರೆ ಪುನಶ್ಚೇತನ ಕಾಮಗಾರಿ ಸ್ಥಳದಲ್ಲಿ ಗುರುವಾರ ಕೂಲಿಕಾರರಿಗೆ ಹಮ್ಮಿಕೊಂಡಿದ್ದ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ವಿಬಿಜಿ?ರಾಮ್ ಜೀ ಯೋಜನೆಯಡಿ ದಿನಕ್ಕೆ ?382 ಕೂಲಿ ನೀಡಲಾಗುತ್ತಿದ್ದು, ಕೂಲಿಕಾರರಿಗೆ ನಿರಂತರ ಕೆಲಸ ಒದಗಿಸಲಾಗುವುದು.

ಕೆಲಸ ಬಯಸುವವರು ಗ್ರಾಮ ಪಂಚಾಯಿತಿಗೆ ನಮೂನೆ?6ರಲ್ಲಿ ಕೆಲಸದ ಅರ್ಜಿ ಸಲ್ಲಿಸಿ ಉದ್ಯೋಗ ಪಡೆಯಬಹುದು. ಯೋಜನೆಯಡಿ ಸಾಮೂಹಿಕ ಹಾಗೂ ವೈಯಕ್ತಿಕ ಕಾಮಗಾ-ರಿಗಳನ್ನು ಕೈಗೊಳ್ಳಲು ಅವಕಾಶವಿದೆ ಎಂದರು. ವೈಯಕ್ತಿಕ ಕಾಮಗಾರಿಗಳಲ್ಲಿ ಜಾನುವಾರು ಶೆಡ್, ಕೋಳಿ ಶೆಡ್, ಮೇಕೆ ಶೆಡ್, ಕೃಷಿಹೊಂಡ ನಿರ್ಮಾಣ ಸೇರಿದಂತೆ ವಿವಿಧ ತೋಟಗಾ-ರಿಕೆ ಚಟುವಟಿಕೆಗಳನ್ನು ಕೈಗೊಳ್ಳಬಹುದಾಗಿದೆ. ಅರ್ಹ ಫಲಾನುಭವಿಗಳು ಅಗತ್ಯ ದಾಖಲೆಗಳನ್ನು ಗ್ರಾಮ ಪಂಚಾಯಿತಿಗೆ ಸಲ್ಲಿಸಿ ಸೌಲಭ್ಯ ಪಡೆದುಕೊಳ್ಳಬೇಕು ಎಂದು ತಿಳಿಸಿದರು. ಭಾರತ್ ಜೋಡೋ ಯುವ ಸಂಘಗಳ ನೋಂದಣಿಗೆ ಕರೆ



18ರಿಂದ 35 ವರ್ಷದೊಳಗಿನ ಯುವಕರು ತಮ್ಮ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಭಾರತ್ ಜೋಡೋ ಯುವ ಸಂಘಗಳನ್ನು ರಚಿಸಿ ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಳ್ಳಬಹುದಾಗಿದೆ. ನೋಂದಾಯಿತ ಸಂಘಗಳು ಸ್ವಚ್ಛತೆ, ಪರಿಸರ ಸಂರಕ್ಷಣೆ, ವೃಕ್ಷಾರೋಪಣ, ಜಲ ಸಂರಕ್ಷಣೆ, ಆರೋಗ್ಯ ಜಾಗೃತಿ, ಕ್ರೀಡೆ, ಸಾಂಸ್ಕೃತಿ-ಕ ಕಾರ್ಯಕ್ರಮ, ಶಿಕ್ಷಣ ಹಾಗೂ ಸರ್ಕಾರಿ ಯೋಜನೆಗಳ ಕುರಿತು ಅರಿವು ಮೂಡಿಸುವ ಚಟುವಟಿಕೆಗಳಲ್ಲಿ ಭಾಗವಹಿಸಬಹುದು. ವ್ಯಸನಮುಕ್ತ ಸಮಾಜ ನಿರ್ಮಾಣ, ವಿಪತ್ತು ನಿರ್ವಹಣೆ ಸೇರಿದಂತೆ ವಿವಿಧ ಸಮಾಜಮುಖಿ ಕಾರ್ಯಗಳಲ್ಲಿ ಯುವ ಸಂಘಗಳು ತೊಡಗಿಸಿಕೊಳ್ಳಲು ಅವಕಾಶವಿದೆ ಎಂದು ಅಮರೇಶ್ ತಿಳಿಸಿದರು.

## ವರ ಮಹಾಲಕ್ಷ್ಮಿ ಹಬ್ಬ ಬಳ್ಳಾರಿ ದುರ್ಗಮ್ಮಗೆ ವಿಶೇಷ ಅಲಂಕಾರ

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ: ವರಮಹಾಲಕ್ಷ್ಮಿ ಹಬ್ಬದ ಅಂಗವಾಗಿ ಇಂದು ನಗರದ ಆರಾಧ್ಯ ದೇವತೆ ಕನಕ ದುರ್ಗಮ್ಮ ವಿಗ್ರಹಕ್ಕೆ ಬಂಗಾರದ ಆಭರಣಗಳ ವಿಶೇಷ ಅಲಂಕಾರ ಹಾಗೂ ವಿಶೇಷ ಪೂಜೆ ನಡೆಸಲಾಗಿದೆ.**



ಭಕ್ತರು ಸಹ ಬೆಳಗಿನಿಂದ ದುರ್ಗಮ್ಮ ದೇವರ ದರ್ಶನವನ್ನು ಸಾಲಿನಲ್ಲಿ ನಿಂತು ಪಡೆಯುತ್ತಿದ್ದಾರೆ. ಹಬ್ಬದ ಅಂಗವಾಗಿ ಇಂದು ಸಂಜೆ 6.30 ಕ್ಕೆ ಸಾಂಸ್ಕೃತಿ-ಕ ಕಾರ್ಯಕ್ರಮಗಳ ಪ್ರದರ್ಶನವನ್ನು ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಳ್ಳಲಾಗಿ-ತ್ತು. ಧರ್ಮಕರ್ತರೂ ಆಗಿರುವ ಮೇಯರ್ ಪಿ.ಗಾದೆಪ್ಪ ತೀರ್ವಂತೆ ಗಣ್ಯರು ಹಾಗೂ ಭಕ್ತಾದಿಗಳು ದರ್ಶನ ಭಾಗ್ಯ ಪಡೆದರು.

## ಮಸ್ಕಿ:ದಲಿತರ ಮೇಲಿನ ಅತ್ಯಾಚಾರ,ಕೊಲೆ ಖಂಡಿಸಿ ಬೃಹತ್ ಪ್ರತಿಭಟನೆ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಇತ್ತಿಚೆಗೆ ಸಿರವಾರ ತಾಲೂಕಿನ ಹೊಕ್ರಾಣಿ ಗ್ರಾಮದ ದಲಿತ ಯುವತಿ ಅಶ್ವಿನಿ,ಲಿಂಗಸುಗೂರು ತಾಲೂಕಿನ ಕರಡಕಲ್ ಗ್ರಾಮದ ರಾಣೆಮ್ಮ ಹಾಗೂ ದೇವದುರ್ಗ ತಾಲೂಕಿನ ಹದ್ದಿನಾಳ ಗ್ರಾಮದ ದಲಿತ ಮುಖಂಡ ಭೂಮಾನಂದ ಅವರ ಪ್ರಕರಣಗಳನ್ನು ಉಲ್ಲೇಖಿಸಿ ಮಸ್ಕಿಯಲ್ಲಿ ದಲಿತ ಪರ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಎದುರುಗಡೆ ಪ್ರತಿಭಟನೆ ನಡೆಸಲಾಯಿತು.**

ಬಳಿಕ ಮಸ್ಕಿ ತಹಶೀಲ್ದಾರರ ಮೂಲಕ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಮಸ್ಕಿ ಪುರಸಭೆ ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯ



ಮೌನೇಶ ಮುರಾರಿ ಇಂದು ನಾವು ಯಾರ ವಿರುದ್ಧ ಹೋರಾಟ ಮಾಡಬೇಕು ಎಂಬುದೇ ತಿಳಿಯದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಹಲವು ರಾಜಕೀಯ ಪಕ್ಷಗಳ ಗುಲಾಮಗಿ-ರಿಯ ಸುಳಿಯಲ್ಲಿ ಸಿಲುಕಿರುವುದೇ ಇದಕ್ಕೆ ಪ್ರಮುಖ ಕಾರಣ"ಎಂದು ಹೇಳಿದರು. ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ದೊಡ್ಡಪ್ಪ ಮುರಾರಿ ಮಾತನಾಡಿ ಪ್ರಸ್ತುತ ಪೊಲೀಸ್ ಇಲಾಖೆಯ ಬಗ್ಗೆ ಸಾರ್ವಜನಿಕರಲ್ಲಿ ಭಯದ ವಾತಾವರಣ ಕಡಿಮೆಯಾಗಿದ್ದು,ಪೊಲೀಸರ ಲ್ಲಿಯೂ ಹಿಂದೆ ಇದ್ದ ಗಟ್ಟಿತನ ಕಾಣಿಸುತ್ತಿಲ್ಲ.

ನಂತರ ಹಿರಿಯ ಸಾಹಿತಿ ದಾನಪ್ಪ ಸಿ.ನೀಲೋಗಲ್ ಅವರು ಮಾತನಾಡಿ,ಸಂವಿಧಾನ ವಿರೋಧಿ ಚಟುವಟಿಕೆಗಳಲ್ಲಿ ತೊಡಗುವವರು ಯಾರೇ ಆಗಿದ್ದರೂ ಅವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಹಿರಿಯ ಸಾಹಿತಿ ದಾನಪ್ಪ ಸಿ.ನೀಲೋಗಲ್ ಆಗ್ರಹಿಸಿದರು.ಕೊಲೆ ಹಾಗೂ ಅತ್ಯಾಚಾರದಂತಹ ಗಂಭೀರ ಅಪರಾಧಗಳಿಗೆ ಗರಿಷ್ಠ ಕಠಿಣ ಶಿಕ್ಷೆ ವಿಧಿಸುವ ಮೂಲಕ ಕಾನೂನಿನ ಭಯ ಮೂಡಿಸಬೇಕು ಎಂದು ಹೇಳಿದರು. ನಂತರ ದಲಿತ ಹಿರಿಯ ಮುಖಂಡ ಹನುಮಂತಪ್ಪ ವೆಂಕಟಾಪೂರು ಮಾತನಾಡಿ,ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದ್ದು,ಕೇವಲ 20 ದಿನಗಳಲ್ಲಿ ಮೂವರು ದಲಿತರ ಸಾವು ಸಂಭವಿಸಿರುವುದು ಆತಂಕಕಾರಿ ಎಂದು ಹೇಳಿದರು. ಮಲ್ಲಪ್ಪ ಎಸ್ ಗೋನಾಳ ಮಾತನಾಡಿ ರಾಜ್ಯ ಹಾಗೂ ಜಿಲ್ಲೆಯಲ್ಲಿ ದಲಿತರನ್ನೇ ಗುರಿಯಾಗಿಸಿಕೊಂಡು ನಿರಂತರವಾಗಿ ಘಟನೆಗಳು ನಡೆಯುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ.

ಈ ಸಂದರ್ಭದಲ್ಲಿ ಮಸ್ಕಿ ಪುರಸಭೆ ವಿರೋಧ ಪಕ್ಷದ ನಾಯಕರಾದ ದೊಡ್ಡ ಕ-ರಿಯಪ್ಪ ಮುರಾರಿ,ದುರ್ಗಾ ಪ್ರಸಾದ್ ತೋರಣ ದಿನ್ನಿ,ಮೌನೇಶ ಬಳಗಾನೂರ,ಅಮರೇಶ ಪಾಮನಕಲ್ಲೂರು,ಯಮುನೂರಪ್ಪ ಭೇರ್ಗಿ,ಬಸವರಾಜ ಆರ್.ಡಿ.ಉದ್ಬಾಳ,ಕಿರಣ್ ವಿ.ಮುರಾರಿ,ಪ್ರಶಾಂತ ಕೊಠಾರಿ,ರಂಜಿತ್ ಮುರಾರಿ,ಹನುಮಂತಪ್ಪ ಮೆದಿಕಿನಾಳ,ರವಿ ಬೆಳಗಿನೂರು,ರವಿ ಮೆದಿಕಿನಾಳ,ಬಸವರಾಜ ಇರಕಲ್,ಹುಚ್ಚರಡ್ಡಿ ಮೆದಿಕಿನಾಳ,ಮೌನೇಶ ಬಡಿಗೇರ್ ಗಾಂಧಿನಗರ ಇನ್ನಿತರರು ಇದ್ದರು.

## ಅತ್ಯಾಚಾರಗೈದು ಕೊಲೆಗೈದ ಪಾಪಿಗಳಿಗೆ ಕಠಿಣ ಶಿಕ್ಷೆ ಆಗಲಿ: ಮೌನೇಶ ಜಾಲವಾಡಗಿ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ರಾಯಚೂರು ಜಿಲ್ಲೆಯಲ್ಲಿ ನಿರಂತರವಾಗಿ ದಲಿತರ ಮೇಲೆ ಹಲ್ಲೆ, ದೌರ್ಜನ್ಯ, ಅತ್ಯಾಚಾರ ಪ್ರಕರಣಗಳು ಹೆಚ್ಚಾಗುತ್ತಿದ್ದು, ಒಂದರ ಮೇಲೊಂದರಂತೆ ಪ್ರಕರಣ ಹಾಗೂ ಕೃತ್ಯಗಳು ಬೆಳಕಿಗೆ ಬರುತ್ತಿದ್ದು, ರಾಯಚೂರು ಜಿಲ್ಲೆಯ ಸಿರವಾರ ತಾಲೂಕಿನ ಹೊಕ್ರಾಣಿ ಗ್ರಾಮದ ಯುವತಿ ಅಶ್ವಿನಿಯ ಅನುಮಾನಾಸ್ಪದ ಸಾವು ಹಾಗೂ ಅತ್ಯಾಚಾರ ಪ್ರಕರಣ ಇಡೀ ಜಿಲ್ಲೆಯ ಜನತೆಯ ಮೇಲೆ ಕೆಟ್ಟ ಪರಿಣಾಮ ಬೀರಿದ್ದು,**



ಇದರಿಂದಾಗಿ ಜಿಲ್ಲೆಯ ಜನಸಾಮಾನ್ಯರ ಮನೆ ಮನದಲ್ಲೂ ಆತಂಕ ಮನೆ ಮಾಡಿದೆ ಎಂದು ದಲಿತ ವಿದ್ಯಾರ್ಥಿ ಪರಿಷತ್ ಜಿಲ್ಲಾ ಸಂಚಾಲಕ ಮೌನೇಶ ಜಾಲವಾಡಗಿ ಹೇಳಿದರು. ಅಕ್ರಮ ಚಟುವಟಿಕೆಗಳು ಕೊಲೆ, ಅತ್ಯಾಚಾರಗಳನ್ನು ತಡೆಯುವಲ್ಲಿ ಜಿಲ್ಲಾ ಪೊಲೀಸ್ ಇಲಾಖೆಯ ನಿರ್ಲಕ್ಷ ಎದ್ದು ಕಾಣುತ್ತಿದೆ. ಹಾಗೂ ಜಿಲ್ಲಾಡಳಿತದ ಸಂಪೂರ್ಣ ವೈಫಲ್ಯಕ್ಕೆ ಇಡಿದ ಕೈಗನ್ನಡಿಯಂತೆಅಇಂದು ಇಂಥ-ಹ ಪೈಶಾಚಿಕ ಕೃತ್ಯಗಳು ಮುನ್ನೆಲೆಗೆ ಬರುತ್ತಿರುವುದು ಆಡಳಿತ ಯಂತ್ರಾಂಗಕ್ಕೆ ನಾಚಿಕೆಗೇಡಿನ ಸಂಗತಿ ಎಂದು ಆಪಾದಿಸಿದರು.

## ಜಿಲ್ಲಾ ಗವರ್ನರ್‌ರಿಂದ ರೋಟರಿ ಕ್ಲಬ್ ಮುಧೋಳಕ್ಕೆ ಅಧಿಕೃತ ಭೇಟಿ

ನೈಜ್ಯ ದೆಸೆ ನ್ಯೂಸ್

**ಮುಧೋಳ: ರೋಟರಿ ಕ್ಲಬ್ ಆಫ್ ಮುಧೋಳ ವತಿಯಿಂದ ರೋಟರಿ ಅಂತರರಾಷ್ಟ್ರೀಯ ಜಿಲ್ಲೆ 3170ರ ಜಿಲ್ಲಾ ಗವರ್ನರ್ ರೋಟೇರಿಯನ್ ಡಾ. ಲೆನ್ನಿ ಡಾ ಕೋಸ್ಟಾ ಅವರ ಅಧಿಕೃತ ಕ್ಲಬ್ ಭೇಟಿ ಕಾರ್ಯಕ್ರಮವು ಮುಧೋಳದಲ್ಲಿ ಯಶಸ್ವಿಯಾಗಿ ನಡೆಯಿತು.**

ಈ ಸಂದರ್ಭದಲ್ಲಿ ಮಹಾಲಿಂಗಪುರ ರಸ್ತೆಯ ಸರ್ಕಾರಿ ಆಸ್ಪತ್ರೆಯಲ್ಲಿ ನವಜಾತ ಶಿಶುಗಳಿಗೆ ಅಗತ್ಯವಿರುವ ಶಿಶು ಆರೈಕೆ ಕಿಟ್‌ಗಳನ್ನು ವಿತ-ರಿಸಲಾಯಿತು. ಜಿಲ್ಲಾ ಗವರ್ನರ್ ಡಾ. ಲೆನ್ನಿ ಡಾ ಕೋಸ್ಟಾ ಅವರ ಉಪಸ್ಥಿತಿಯಲ್ಲಿ ಕಿಟ್‌ಗಳನ್ನು ಹಸ್ತಾಂತರಿಸಲಾಯಿತು. ಸಹಾಯಕ ಜಿಲ್ಲಾ ಗವರ್ನರ್ ರೋಟೇರಿಯನ್ ಕಿರಣ್ ಜಲಿಹಾಳ್ ಅವರು ಉಪಸ್ಥಿತರಿದ್ದರು. ನಂತರ ರೋಟರಿ ಭವನದಲ್ಲಿ ನಡೆದ ಸಭೆಯಲ್ಲಿ ಕ್ಲಬ್‌ನ ವಿವಿಧ ಸಮಾಜಮುಖಿ ಸೇವಾ ಚಟುವಟಿಕೆಗಳು, ಇದುವರೆಗೆ ಕೈಗೊಂಡ




ಕಾರ್ಯಕ್ರಮಗಳು ಹಾಗೂ ಮುಂದಿನ ಯೋಜನೆಗಳ ಕುರಿತು ಚರ್ಚಿಸಲಾಯಿತು. ರೋಟರಿ ಕ್ಲಬ್‌ನ ನಿರೂಪಕರಾಗಿ ರೋಟೇರಿಯನ್ ಸ್ವಪ್ನಿಲ್ ಶಾ ಅವರು ಕಾರ್ಯನಿರ್ವಹಿಸಿದರು.

ಸಹಾಯಕ ಜಿಲ್ಲಾ ಗವರ್ನರ್ ಕಿರಣ್ ಜಲಿಹಾಳ್ ಅವರು ಜಿಲ್ಲಾ ಗವರ್ನರ್ ಅವರನ್ನು ಸಭೆಗೆ ಪರಿಚಯಿಸಿದರು. ಹಿಂದಿನ ಅಧ್ಯಕ್ಷ ರೋಟೇ-ರಿಯನ್ ಮಹಾದೇವ ಬಿ. ಯಲಶೆಟ್ಟಿ ಅವರು ನೂತನ ಅಧ್ಯಕ್ಷ ರೋಟೇರಿಯನ್ ಲಕ್ಷ್ಮಣ ಕನಬೂರ ಅವರಿಗೆ ಅಧ್ಯಕ್ಷರ ಕಾಲರ್ ಧರಿಸುವ ಮೂಲಕ ಅಧಿಕಾರ ಹಸ್ತಾಂತರಿಸಿದರು. ಅಧ್ಯಕ್ಷ ರೋಟೇ-ರಿಯನ್ ಲಕ್ಷ್ಮಣ ಕನಬೂರ ಅವರು ಸ್ವಾಗತಿಸಿದರು. ಕಾರ್ಯದರ್ಶಿ ರೋಟೇರಿಯನ್ ಕೌಶಿಕ್ ಕುಲಕರ್ಣಿ ಅವರು ವಂದನಾರ್ಪಣೆ ಸಲ್ಲಿಸಿದರು.

ಜಿಲ್ಲಾ ಗವರ್ನರ್ ಡಾ. ಲೆನ್ನಿ ಡಾ ಕೋಸ್ಟಾ ಅವರು ರೋಟರಿ ಕ್ಲಬ್ ಮುಧೋಳದ ಸೇವಾ ಕಾರ್ಯಗಳನ್ನು ಶ್ಲಾಘಿಸಿ, ಸಮಾಜದ ಅಗತ್ಯಗಳಿಗೆ ಸ್ಪಂದಿಸುವ ಇನ್ನಷ್ಟು ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಉಮೇಶ್ ಬಡಗಿ, ಪಂಚಪ್ಪ ನವನಕ್ಕಿ, ವಿನಾಯಕ ಕುಲಕರ್ಣಿ, ರಾಜೇಶ್ ಮದರಕಂಡಿ, ಗಿರೀಶ್ ಮೋದಿ, ಗೋವಿಂದ ಕೊಡಗ, ಉದಯ ಘೋರಪಡೆ, ಸಂಜೀವ್ ಮುಕೆ, ರಾಹುಲ್ ಇಂಗವಾಲೆ, ಅರ್ಜುನ ಕೊಡಗ, ಸಿದ್ದು ರಾಮತೀರ್ಥ, ವಿವೇಕ ಕಕರಡ್ಡಿ, ಸುಭಾಷ ರಾಮತೀರ್ಥ, ಸಂಜೀವ್ ಓಸ್ವಾಲ್, ಗಣಿ ಹಾಗೂ ಭೋಸಲೆ ಸೇರಿದಂತೆ ರೋಟರಿ ಸದಸ್ಯರು ಉಪಸ್ಥಿತರಿದ್ದರು. "ಸ್ವಾರ್ಥಕ್ಕಿಂತ ಸೇವೆ ಶ್ರೇಷ್ಠ" ಎಂಬ ರೋಟರಿಯ ಧ್ಯೇಯದೊಂದಿಗೆ ಸಮಾಜಮುಖಿ ಸೇವೆಯನ್ನು ಮತ್ತಷ್ಟು ವಿಸ್ತರಿಸುವ ಸಂಕಲ್ಪವನ್ನು ಸದಸ್ಯರು ವ್ಯಕ್ತಪಡಿಸಿದರು.

## ಹೊಕ್ರಾಣಿ ಗ್ರಾಮದ ಯುವತಿಯ ಸಾವಿನ ನಿಷ್ಪಕ್ಷ ಪಾತ ತನಿಖೆಗೆ – ದಲಿತ ವಿದ್ಯಾರ್ಥಿ ಪರಿಷತ್ ಒತ್ತಾಯ

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಸಿರವಾರ ತಾಲೂಕಿನ ಹೊಕ್ರಾಣಿ ಗ್ರಾಮದ ಯುವತಿ ಅಶ್ವಿನಿಯ ಅನುಮಾನಸ್ಪದ ಸಾವು , ಅತ್ಯಾಚಾರ , ಕೊಲೆ ಆರೋಪ ನಿಷ್ಪಕ್ಷಪಾತ ತನಿಖೆಗೆ ಒತ್ತಾಯಿಸಿ ದಲಿತ ವಿದ್ಯಾರ್ಥಿ ಪರಿಷತ್ ನ ಸಂಚಾಲಕರಾದ ಶಶಿಕುಮಾರ್ ಕೆಸರಹಟ್ಟಿ ಸಹಾಯಕ ಆಯುಕ್ತರ ಮೂಲಕ ಗೃಹ ಸಚಿವ ಪ್ರಿಯಾಂಕಾ ಖರ್ಗೆ ಯವರಿಗೆ ಮನವಿಯನ್ನು ಸಲ್ಲಿಸಿದರು .**

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 80 ವರ್ಷಗಳೇ ಕಳೆದವು ಆದರೆ ದಲಿತರಿಗೆ ನಿಜವಾದ ಸ್ವಾತಂತ್ರ್ಯ ದಕ್ಕದಿರುವುದು ವಿಪರ್ಯಾಸವೇ ಸರಿ ಈ ನೆಲದ ಮೇಲೆ ಬದುಕಲು ಜೀವನ್ಮರಣದ ಹೋರಾಟವೇ ಪ್ರತಿದಿನದ ಸವಾಲಾಗಿದೆ. ಒಂದೆಡೆ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು ವಿಜಯೋತ್ಸವ ಆಚ-



ರಿಸುವ ಸಂಭ್ರಮದಲ್ಲಿ ದೇಶವೇ ಮುಳುಗಿದೆ. ಮತ್ತೊಂದೆಡೆ ವರ್ಷವಾದರೂ ಅಸಮಾನತೆಯಿಂದ, ದೌರ್ಜನ್ಯದಿಂದ,ತಾರತಮ್ಯದಿಂದ,ಅತ್ಯಾಚಾರದಿಂದ, ಕ್ರೌರ್ಯದಿಂದ ಬಿಡುಗಡೆಗೊಳ್ಳುವ ಮುಕ್ತಿ ಹೊಂದುವ ನಿಜವಾದ ಸ್ವಾತಂತ್ರ್ಯ ದಿನ ನಮಗಾಗಿ ಬರಬಹುದೇ ಎನ್ನುವ ಆಶಾ ಭಾವನೆಯಿಂದ ಕಾಯುತ್ತಿರುವ ಮುಗ್ಧ ಜನತೆಯನ್ನು ಕಾಣಬಹುದು. ರಾಯಚೂರು ಜಿಲ್ಲೆಯು ಇತ್ತೀಚೆಗೆ ದಲಿತರಿಗೆ ರಕ್ಷಣೆ ಇಲ್ಲದ ನಾಡಾಗಿ ಪರಿವರ್ತನೆಯಾಗಿದೆ. ಹಾಗೂ ನಮ್ಮ ಜಿಲ್ಲೆಯಲ್ಲಿ ಪ್ರತಿ ದಿನ ಕೊಲೆ, ಸುಲಿಗೆ, ದೌರ್ಜನ್ಯ ಹಾಗೂ ಅತ್ಯಾಚಾರ ಪ್ರಕರಣಗಳು ಹೆಚ್ಚಾಗಿ ಕಂಡುಬರುತ್ತಿದ್ದು ಇದರಿಂದ ಜನರು ಜೀವ ಭಯದಲ್ಲಿ ಬದುಕುವಂತ ಆಘಾತಕಾರಿ ಹಾಗೂ ಆತಂಕಕಾರಿ ಪರಿಸ್ಥಿತಿ ಎದುರಾಗಿದೆ.

ಸಿರವಾರ ತಾಲ್ಲೂಕಿನ ಹೊಕ್ರಾಣಿ ಗ್ರಾಮದ ಚಲವಾದಿ ಸಮುದಾಯಕ್ಕೆ ಸೇರಿದ ಕುಮಾರಿ ಅಶ್ವಿನಿ, (22)ತಿಪ್ಪಾರೆಡ್ಡಿ ಅವರ ಪುತ್ರಿ ಈ ಯುವತಿ ಅನುಮಾನಾಸ್ಪದವಾಗಿ ಮೃತಪಟ್ಟಿರುವ ಘಟನೆ ಜಿಲ್ಲೆಯಲ್ಲಿ ಮತ್ತೆ ರಾಜ್ಯದಲ್ಲಿ ಗಂಭೀರ ಸ್ವರೂಪದ ಪ್ರಕರಣವಾಗಿದೆ. ಬಯಲು ಶೌಚಕ್ಕೆ ತೆರಳಿದ್ದ ಸಂದರ್ಭದಲ್ಲಿ ಯುವತಿಯ ಮೇಲೆ ಅತ್ಯಾಚಾರ ಎಸಗಿ, ಬಳಿಕ ಕೊಲೆ ಮಾಡಿ ಬಾವಿಗೆ ಎಸೆದಿರುವ ಆರೋಪವನ್ನು ಕುಟುಂಬಸ್ಥರು ಹಾಗೂ ಹೋರಾಟಗಾರರು ಮುಂದಿಟ್ಟಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಸಮಗ್ರ ತನಿಖೆ ನಡೆಸಿ, ನಿಜಾಂಶವನ್ನು ಹೊರತರಬೇಕು ಈ ಪ್ರಕರಣದಲ್ಲಿ ಭಾಗಿಯಾಗಿರುವ ಎಲ್ಲಾ ಆರೋಪಿಗಳನ್ನು ಹಾಗೂ ತಪ್ಪಿತಸ್ಥರು ಯಾರೇ ಆಗಿದ್ದರೂ ಅವರ ವಿರುದ್ಧ ಸೂಕ್ತ ಕಾನೂನು ಬದ್ಧವಾಗಿ ಕಠಿಣ ಕ್ರಮ ಕೈಗೊಳ್ಳಬೇಕು.

ಸಂತ್ರಸ್ತ ಕುಟುಂಬಕ್ಕೆ ನ್ಯಾಯ ಒದಗಿಸುವುದರ ಜೊತೆಗೆ, ಕುಟುಂಬಕ್ಕೆ ಸೂಕ್ತ ರಕ್ಷಣೆ ಮತ್ತು ಅಗತ್ಯ ಪರಿಹಾರ ನೀಡಬೇಕು ಎಂದು ದಲಿತ ವಿದ್ಯಾರ್ಥಿ ಪರಿಷತ್ ವತಿಯಿಂದ ಒತ್ತಾಯಿಸಿದರು . ಈ ಸಂದರ್ಭದಲ್ಲಿ ಜಾಂಭವ ಯುವಸೇನೆ ಕಾರ್ಯದರ್ಶಿ ಸುರೇಶ್ , ಅಮರೇಶ್ ಹೆಚ್ ಆನೆಹೊಸೂರ್ , ರಾಜು ಬಾವಿಮನಿ ಸೇರಿದಂತೆ ಇತರರು ಇದ್ದರು .

## ನೇಮಕಾತಿ ಪ್ರಕಟಣೆ

**GAIL ನೇಮಕಾತಿ 2026–1 ಅರೆಕಾಲಿಕ ವಿಸಿಟಿಂಗ್ ಕನ್ಸಲ್ಟೆಂಟ್ ಹುದ್ದೆಗೆ ನೇರ ಸಂದರ್ಶನ (Walk-in Interview)**
**21 ಆಗಸ್ಟ್ 2026**

GAIL ನೇಮಕಾತಿ 2026: 1 ಅರೆಕಾಲಿಕ ವಿಸಿಟಿಂಗ್ ಕನ್ಸಲ್ಟೆಂಟ್ ಹುದ್ದೆಗೆ ಅರ್ಜಿ ಸಲ್ಲಿಸಿ. 'ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್' (GAIL) ತನ್ನ ಆಗಸ್ಟ್ 2026ರ ಅಧಿಕೃತ ಅಧಿಸೂಚನೆಯ ಮೂಲಕ, ಅರೆಕಾಲಿಕ ವಿಸಿಟಿಂಗ್ ಕನ್ಸಲ್ಟೆಂಟ್ ಹುದ್ದೆಯನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಮಧ್ಯಪ್ರದೇಶದ ಗುಣಾ (Guna) ಪ್ರದೇಶದಲ್ಲಿ ಉದ್ಯೋಗವನ್ನು ಹುಡುಕುತ್ತಿರುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 24–ಆಗಸ್ಟ್–2026 ರಂದು ನಡೆಯುವ ನೇರ ಸಂದರ್ಶನದಲ್ಲಿ ಭಾಗವಹಿಸಬಹುದು. ಅಧಿಕೃತ ವೆಬ್‌ಸೈಟ್: gailonline.com

# ಕಲ್ಲೂರು– ಶಿಶು ಪಾಲನಾ ಕೇಂದ್ರದಲ್ಲಿ ತಾಯಂದಿರಿಗೆ ಜಾಗೃತಿ.

## ಕುಟುಂಬ ಕಲ್ಯಾಣ ತಾತ್ಕಾಲಿಕ ವಿಧಾನಗಳು ತಾಯಿ ಮಗುವಿನ ಅರೋಗ್ಯದ ದೃಷ್ಟಿಯಿಂದ ಮಹತ್ವಪೂರ್ಣವಾಗಿವೆ:

❏ ನೈಜ್ಯ ದೆಸೆ ನ್ಯೂಸ್

ಕಲ್ಲೂರು: ಚಿಕ್ಕ ಕುಟುಂಬ ಹೊಂದಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿ ಉಚಿತವಾಗಿ ಮಹಿಳೆಯ–ರಿಗೆ ಲಭ್ಯವಿರುವ ಕಾಪರ್–ಟಿ, ಮಾಲಾ–ಎನ್, ಛಾಯಾ(ಮಾತ್ರೆಗಳು), ಪ್ರತಿ ಮೂರು ತಿಂಗಳಿಗೊಮ್ಮೆ ಪಡೆಯಬಹುದಾದ ಅಂತರ ಚುಚ್ಚುಮದ್ದು, ಹಾಗೂ ಪುರುಷರಿಗೆ ಲಭ್ಯವಿರುವ ಕಾಂಡೊಮ್ ಬಳಸುವಿಕೆಯಿಂದ ಮಗುವಿನ ಜನನದ ಮಧ್ಯ ಕನಿಷ್ಟ ಮೂರು ವರ್ಷಗಳ ಅಂತರ ಕಾಪಾಡಲು ಸಹಕಾರಿ ಎಂದು ಕಲ್ಲೂರು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ ಸಂಗಮೇಶ್ ತಿಳಿಸಿದರು.

ಕಲ್ಲೂರು ಗ್ರಾಮದಲ್ಲಿ ಗ್ರಾಮಪಂಚಾಯತ ಮೂಲಕ ವಿಬಿಜಿ ರಾಮ್ ಜಿ ಕೂಲಿಕಾರ್ಮಿಕರು ತಮ್ಮ 6 ತಿಂಗಳಿನಿಂದ 3 ವರ್ಷದ ಒಳಗಿನ ಮಕ್ಕಳ ದಿನದ ಅವಧಿಯಲ್ಲಿ ಪಾಲನೆಗಾಗಿ ಆರಂಭಿಸಿರುವ ಶಿಶು ಪಾಲನಾ ಕೇಂದ್ರದಲ್ಲಿ ತಾಯಂದಿರಿಗೆ




ಜಾಗೃತಿ ನೀಡಿ ಮಾತನಾಡುತ್ತಾ, ಸರಕಾರದ ಈ ಯೋಜನೆಯು ಮಹತ್ವಪೂರ್ಣವಾದುದು, ಕೇಂದ್ರದಲ್ಲಿ ತೆಗೆದುಕೊಳ್ಳುವ ಕಾಳಜಿಯ ಜೊತೆ ಜೊತೆಗೆ ಮಗುವಿನ ಆರೋಗ್ಯಕರ ಬೆಳವಣಿಗೆಗೆ ಎರಡನೇ ಮಗುವಿನ ಜನನಕ್ಕೆ ಅಂತರವಿಡಲು ಇಲಾಖೆಯಲ್ಲಿ ಉಚಿತವಾದ ವಿಧಾನಗಳ ಅಳವಡಿಕೆ ಮಾಹಿತಿ ಪಡೆಯಲು ಹಾಗೂ ಮಕ್ಕಳು ಬೇಡವೆನಿಸಿದರೆ ಲ್ಯಾಪರ್‌ಸ್ಕೋಪ್, ಟ್ಯುಬೆಕ್ಟೂಮಿ, ಶಸ್ತ್ರಚಿಕಿತ್ಸೆ ಲಭ್ಯವಿದೆ. ಪುರುಷರಿಗೆ ಎನ್‌ಎಸ್‌ವಿ ಶಸ್ತ್ರಚಿಕಿತ್ಸೆ ಲಭ್ಯವಿದೆ. ಎಂದು ತಿಳಿಸಿದರು.

ಉಪಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ ಮಾತನಾಡಿ, ಮಗುವು ಎರಡು ವರ್ಷ ತುಂಬುವವರೆಗೂ ಪೂರಕ ಆಹಾರದೊಂದಿಗೆ ತಾಯಿಯ ಎದೆಹಾಲುನೀಣಿಸಲು ಮರೆಯಬಾರದು. ಅಲ್ಲದೆ ಮಗುವಿನ ಬಾಲ್ಯದಲ್ಲಿ ಕಂಡುಬರುವ 12 ಮಾರಕ ರೋಗಗಳ ವಿರುದ್ಧದ ಲಸಿಕೆಗಳನ್ನು ತಪ್ಪದೆ ಆಯಾ ಅವಧಿಯಲ್ಲಿ ಹಾಕಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಡಾ ಬಿಆರ್ ಅಂಬೇಡ್ಕರ್ ಬಾಲಕರ ಮೇಟ್ರೀಕ್ ಪೂರ್ವ ವಸತಿ ನಿಲಯಕ್ಕೆ ಬೇಟಿ ಮುಂಜಾಗ್ರತಾ ಕ್ರಮಗಳ ಬಗ್ಗೆ ಅಡುಗೆ ಸಿಬ್ಬಂದಿಯರಿಗೆ ತಿಳಿಸಲಾಯಿತು. ಜಿಲ್ಲಾ ಅರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ಮಂಜುಳಾ ಶುಕ್ಲಾ, ಆರೋಗ್ಯ ನಿರೀಕ್ಷಣಾಧಿಕಾರಿ ಮಹಮ್ಮದ್, ಅಂಗನವಾಡಿ ಕಾರ್ಯಕರ್ತೆ ಚಂದ್ರನೀಲಾ, ಶಿಶು ಪಾಲನಾ ಕೇಂದ್ರದ ಕೆರ್‌ಟೇಕರ್ ಮಹಾದೇವಿ, ಪವಿತ್ರಾ, ಹಾಗೂ ಇತರರು ಉಪಸ್ಥಿತರಿದ್ದರು.

## ಸಡಗರ ಸಂಭ್ರಮದಿಂದ ವರಮಹಾಲಕ್ಷ್ಮೀ ಹಬ್ಬ ಆಚರಣೆ

❏ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ಶ್ರಾವಣ ಮಾಸದ ಪ್ರಮುಖ ಹಬ್ಬಗಳಲ್ಲಿ ಒಂದಾದ ವರಮಹಾಲಕ್ಷ್ಮೀ ಹಬ್ಬವನ್ನು ಕುಷ್ಟಗಿ ನಗರದೆಲ್ಲೆಡೆ ಶುಕ್ರವಾರ ಭಕ್ತಿ, ಸಡಗರ ಹಾಗೂ ಸಂಭ್ರಮದಿಂದ ಆಚರಿಸಲಾಯಿತು. ನಗರದ ಕೃಷ್ಣಗಿರಿ ಕಾಲೋನಿಯ ಸಾವಿತ್ರ ಜಿಗೇರಿ ಅವರ ಮನೆಯಲ್ಲಿ ವರಮಹಾಲಕ್ಷ್ಮೀ ಪೂಜೆಯನ್ನು ವಿಶೇಷವಾಗಿ ನೆರವೇರಿಸಲಾಯಿತು.



ಮಳೆಯ ಕೊರತೆಯಿಂದ ಹೂವು, ಹಣ್ಣು ಸೇರಿದಂತೆ ಹಬ್ಬದ ಸಾಮಗ್ರಿಗಳ ಬೆಲೆ ಗಗನಕ್ಕೇ–ರಿದ್ದರೂ, ಹಬ್ಬದ ಸಂಭ್ರಮಕ್ಕೆ ಯಾವುದೇ ತೊಡಕಾಗಲಿಲ್ಲ. ಮನೆ ಹಾಗೂ ಮಂದಿರಗಳನ್ನು ತಳಿರು–ತೋರಣಗಳಿಂದ ಅಲಂಕರಿಸಲಾಗಿ–ತ್ತು. ಮನೆಯ ಅಂಗಳದಲ್ಲಿ ಬಿಡಿಸಿದ್ದ ಬಣ್ಣಬಣ್ಣದ ರಂಗೋಲಿ ಹಬ್ಬದ ಸೊಬಗನ್ನು ಹೆಚ್ಚಿಸಿತ್ತು. ಮಹಿಳೆಯರು ಮುಂಜಾನೆ ಮಡಿಯುಟ್ಟು ಲಕ್ಷ್ಮೀದೇವಿಯನ್ನು ಪ್ರತಿಷ್ಠಾಪಿಸಿ, ಸೀರೆ ಉಡಿಸಿ, ಬಗೆಬಗೆಯ ಹೂವು ಹಾಗೂ ಆಭರಣಗಳಿಂದ ಅಲಂಕರಿಸಿದರು. ಹಣ್ಣು, ಕಾಯಿ ಸೇರಿದಂತೆ ಒಬ್ಬಟ್ಟು ಹಾಗೂ ವಿವಿಧ ಭಕ್ಷ್ಯಗಳನ್ನು ತಯಾರಿಸಿ ನೈವೇದ್ಯ ಸಮರ್ಪಿಸಿ, ಇಷ್ಟಾರ್ಥ ಸಿದ್ಧಿಗಾಗಿ ದೇವಿಯಲ್ಲಿ ಪ್ರಾರ್ಥಿಸಿದರು. ಗುರುವಾರವೇ ಹೂವು, ಹಣ್ಣು, ಕಾಯಿ, ಬಾಳೆ ಕಂಬ ಸೇರಿದಂತೆ ಅಗತ್ಯ ವಸ್ತುಗಳನ್ನು ಜನರು ಖರೀದಿಸಿದ್ದರೂ, ಶುಕ್ರವಾರವೂ ನಗರದ ಮಾರುಕಟ್ಟೆಯಲ್ಲಿ ವ್ಯಾಪಾರ ಬಿರುಸಿನಿಂದ ನಡೆಯಿತು. ಕುಟುಂಬ ಸಮೇತರಾಗಿ ದೇವಾಲಯಗಳಿಗೆ ತೆರಳಿ ಪೂಜೆ ಸಲ್ಲಿಸಿದ ಭಕ್ತರು, ಬಳಿಕ ಮನೆಗಳಲ್ಲಿ ಹಬ್ಬದೂಟ ಸವಿದರು. ಸಂಜೆ ಲಕ್ಷ್ಮೀದೇವಿಗೆ ದೀಪಾರತಿ ನೆರವೇರಿಸಿ, ನೆರೆಹೊರೆಯ ಮುತ್ತೈದೆಯರನ್ನು ಆಹ್ವಾನಿಸಿ ಹೂವು, ಹಣ್ಣು, ಬಳೆ, ರವಿಕೆ ಹಾಗೂ ಕುಂಕುಮ ನೀಡಿ ಸಂಭ್ರಮಿಸಿದರು.

# ವರಮಹಾಲಕ್ಷ್ಮೀ ಹಬ್ಬ: ಮನೆ, ದೇಗುಲಗಳಲ್ಲಿ ವಿಶೇಷ ಪೂಜೆ

❏ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ಪಟ್ಟಣ ಹಾಗೂ ಸುತ್ತಮುತ್ತಲಿನ ಹಳ್ಳಿಗಳಲ್ಲಿ ವರಮಹಾಲಕ್ಷ್ಮೀ ಹಬ್ಬವನ್ನು ಶುಕ್ರವಾರ ಸಂಭ್ರಮದಿಂದ ಆಚರಿಸಲಾಯಿತು. ಮಹಿಳೆಯರು ಮುಂಜಾನೆಯೇ ಎದ್ದು ಮನೆಯನ್ನು ಅಲಂಕರಿಸಿ, ಅಂಗಳದಲ್ಲಿ ಆಕರ್ಷಕರ ರಂಗೋಲಿಯ ಚಿತ್ತಾರವನ್ನು ಬಿಡಿಸಿ, ಹೊಸಬಟ್ಟೆಗಳನ್ನು ತೊಟ್ಟು ಲಕ್ಷ್ಮೀ ದೇವಿಯ ಕಳಶ ಪ್ರತಿಷ್ಠಾಪಿಸಿ, ಅರಿಸಿನ?ಕುಂಕುಮದಿಂದ ಅಲಂಕರಿಸಿ, ಚಿನ್ನಾಭರಣ, ಸೀರೆ, ಹೂವು, ಬಾಳೆಕಂಬಗಳನ್ನಿಟ್ಟು ವಿಶೇಷ ಪೂಜೆ ಸಲ್ಲಿಸಿದರು.

ಶ್ರಾವಣ ಮಾಸದ ಪ್ರಮುಖ ಹಬ್ಬವಾದ ವರಮಹಾಲಕ್ಷ್ಮೀದೇವಿಯ ಪೂಜೆಯು ಮನೆಗಳಲ್ಲಿ ಲಕ್ಷ್ಮೀದೇವಿಯನ್ನು ಪ್ರತಿಷ್ಠಾಪಿಸಿ, ಪೂಜಿಸಲಾಯಿತು.



ಪೂಜೆಯ ವೇಳೆಯಲ್ಲಿ ದೇವಿಯ ನೈವೇದ್ಯಕ್ಕಾಗಿ ಐದಾರು ತರಹದ ಹಣ್ಣುಗಳು, ಹೋಳಿಗೆ, ಕಡುಬು ಸೇರಿದಂತೆ ಬಗೆ ಬಗೆಯ ಸಿಹಿ ತಿನಿಸು ತಯಾರಿಸಿ, ಪೂಜೆಗೆ ಇಡಲಾಗಿತ್ತು. ಕೆಲ ಮನೆಗಳಲ್ಲಿ ಮಹಿಳೆಯರು ಮುತ್ತೈದೆಯರನ್ನು ಮನೆಗೆ ಕರೆಯಿಸಿ ಅವರಿಗೆ ಅರಿಶಿನ? ಕುಂಕುಮ ನೀಡುವ ಶಾಸ್ತ್ರವನ್ನೂ ಮಾಡಿದ್ದು ಕಂಡುಬಂದಿತು.

ವಿಶೇಷ ಅಲಂಕಾರಿಕ: ಮಹಾಲಕ್ಷ್ಮೀ ದೇಗುಲದಲ್ಲಿ ಲಕ್ಷ್ಮೀ ದೇವಿಗೆ ವಿಶೇಷವಾದ ಅಲಂಕಾರ ಮಾಡಲಾಗಿತ್ತು, ತುಳಜಾ ಭವಾನಿ ದೇವಸ್ಥಾನ, ಮಾರೆಮ್ಮ ದೇಗುಲ, ದುರ್ಗಮ್ಮ ದೇಗುಲ, ಲಕ್ಷ್ಮೀ ದೇವಸ್ಥಾನ ಹೀಗೆ ಪಟ್ಟಣದಲ್ಲಿನ ಬಹುತೇಕ ದೇವಿಯ ದೇಗುಲಗಳಲ್ಲಿ ದೇವಿಗೆ ವಿಶೇಷ ಅಲಂಕಾರ ಮಾಡಿ, ಪೂಜಾ ಕಾರ್ಯಕ್ರಮ ನಡೆಸುವ ಮೂಲಕ ಹಬ್ಬವನ್ನು ಸಡಗರದಿಂದ ಆಚರಿಸಲಾಯಿತು. ದೇವಸ್ಥಾನಗಳಲ್ಲಿ ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು ಭಕ್ತಿ ಸಮರ್ಪಿಸಿದರು.

ಲಕ್ಷ್ಮೀ ದೇವಸ್ಥಾನದ ಪೂಜಾರಿ ಯಮುನಪ್ಪ ಪೂಜಾರಿ ಮಾತನಾಡಿ, ವರಮಹಾಲಕ್ಷ್ಮೀ ಹಬ್ಬವನ್ನು ಕಳೆದ ಹಲವಾರು ವರ್ಷಗಳಿಂದ ನಾವು ಆಚರಿಸುತ್ತಾ ಬಂದಿದ್ದೇವೆ ನೀವೆಲ್ಲರಿಗೂ ಶುಭನುಂಟುಮಾಡಲಿ ಎಂದು ಹಾರೈಸಿದರು.

ಮುಂಜಾನೆಯೇ ಲಕ್ಷ್ಮೀ ದೇವಿಯನ್ನು ಪ್ರತಿಷ್ಠಾಪಿಸಿ ಹೂವು?ಹಣ್ಣುಗಳಿಂದ ಅಲಂಕಾರ ಮಾಡಿ ಪೂಜೆ ಸಲ್ಲಿಸಲಾಯಿತು. ನಂತರ ಸುತ್ತಮುತ್ತಲಿನ ಮನೆಯ ಮಹಿಳೆಯರನ್ನು ಮನೆಗೆ ಆಹ್ವಾನಿಸಿ, ಅವರಿಗೆ ಅರಿಸಿನ ಕುಂಕುಮ ನೀಡುವ ನೀಡುವ ಮೂಲಕ ಉಡಿತುಂಬುವ ಶಾಸ್ತ್ರವನ್ನೂ ಮಾಡಲಾಯಿತು ಇದೊಂದು ಮಹಿಳೆಯ–ರಿಗೆ ವಿಶೇಷ ದಿನ ಎನ್ನುತ್ತಾರೆ ಮಹಿಳೆಯರು.

## ಮಾಜಿ ಮುಖ್ಯಮಂತ್ರಿ ಅರಸ್ ಅವರ ಜನ್ಮದಿನ ಆಚರಣೆ

❏ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಪಟ್ಟಣದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾದ ಸರ್ವಜ್ಞ ವಿದ್ಯಾಪೀಠ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರಾಥ–ಮಿಕ ಹಾಗೂ ಪ್ರೌಢಶಾಲೆಯಲ್ಲಿ ಪ್ರಗತಿಪರ ಸಾಧನೆಗಳ ಸರದಾರ, ಸಾಮಾಜಿಕ ಪರಿವರ್ತನೆ ಹರಿಕಾರ ಕರ್ನಾಟಕ ರಾಜ್ಯದ ಮಾಜಿಮುಖ್ಯಮಂತ್ರಿಗಳಾದ ಡಿ.ದೇವರಾಜ ಅರಸು ಅವರ 111ನೇ ಜನ್ಮದಿನಾಚರಣೆಯನ್ನು ಗುರುವಾರ ಆಚರಿಸಲಾಯಿತು.



ಕಾರ್ಯಕ್ರಮದಲ್ಲಿ ಸಂಸ್ಥಾಪಕ ಅಧ್ಯಕ್ಷರಾದ ಸಿದ್ದನಗೌಡ ಬ. ಮಂಗಳೂರ, ಮುಖ್ಯ ಗುರುಗಳಾದ ಸಂತೋಷ ಪವಾರ, ಸರ್ವ ಸಿಬ್ಬಂದಿ ವರ್ಗದವರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ತುರ್ವಿಹಾಳ ಪಟ್ಟಣ ಪಂಚಾಯಿತಿ ಅಧ್ಯಕ್ಷರಾಗಿ ಶರಣಪ್ಪ ಹೊಸಗೌಡ್ರು ಅವಿರೋಧ ಆಯ್ಕೆ

## ಅಭಿವೃದ್ಧಿಗೆ ಹೊಸ ಚೈತನ್ಯ: ಶಾಸಕ ಬಸನಗೌಡ ತುರವಿಹಾಳ ಸೇರಿದಂತೆ ಮುಖಂಡರು, ಸದಸ್ಯರಿಂದ ಅಭಿನಂದನೆ

❏ ನೈಜ್ಯ ದೆಸೆ ನ್ಯೂಸ್

ತುರ್ವಿಹಾಳ: ತುರ್ವಿಹಾಳ ಪಟ್ಟಣ ಪಂಚಾಯಿತಿಯ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ವಾರ್ಡ್ ನಂ.7ರ ಸದಸ್ಯರಾದ ಶ್ರೀ ಶರಣಪ್ಪ ತಂದೆ ಬಸನಗೌಡ ಹೊಸಗೌಡ್ರು ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಶುಕ್ರವಾರ ಬೆಳಗ್ಗೆ ಪಟ್ಟಣ ಪಂಚಾಯಿತಿ ಕಚೇರಿಯಲ್ಲಿ ಚುನಾವಣಾ ಪ್ರಕ್ರಿಯೆ ನಡೆಯಿತು. ಅಧ್ಯಕ್ಷ ಸ್ಥಾನಕ್ಕೆ ಶರಣಪ್ಪ ಹೊಸಗೌಡ್ರು ಅವರು ಮಾತ್ರ ನಾಮಪತ್ರ ಸಲ್ಲಿಸಿದ್ದರು. ಚುನಾವಣಾಧಿಕಾರಿಗಳು ನಾಮಪತ್ರವನ್ನು ಪರಿಶೀಲಿಸಿ ನಿಯಮಾನುಸಾರ ಮಾನ್ಯವೆಂದು ಘೋಷಿಸಿದರು. ಬೇರೆ ಯಾವುದೇ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಮತದಾನ ನಡೆಸುವ ಅಗತ್ಯವಿಲ್ಲದೆ ಶರಣಪ್ಪ ಹೊಸಗೌಡ್ರು ಅವರನ್ನು ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಘೋಷಿಸಲಾಯಿತು.

ಸಿಂಧನೂರು ತಹಶೀಲ್ದಾರ್ ಹಾಗೂ ಚುನಾವಣಾಧಿಕಾರಿ ಶ್ರೀ ಅರುಣ್ ಎಚ್. ದೇಸಾಯಿ ಅವರು ಚುನಾವಣಾ ಪ್ರಕ್ರಿಯೆಯನ್ನು ನಡೆಸಿಕೊಟ್ಟು, ಅಧ್ಯಕ್ಷ ಸ್ಥಾನಕ್ಕೆ ಒಂದೇ ಒಂದು ಮಾನ್ಯ ನಾಮಪತ್ರ ಸಲ್ಲಿಕೆಯಾಗಿದ್ದರಿಂದ ಚುನಾವಣಾ ನಿಯಮಾನುಸಾರ ಶರಣಪ್ಪ ಹೊಸಗೌಡ್ರು ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಅಧಿಕೃತವಾಗಿ ಪ್ರಕಟಿಸಿದರು. ಈ ಸಂದರ್ಭದಲ್ಲಿ ಪಟ್ಟಣ ಪಂಚಾಯಿತಿ ಸದಸ್ಯರು, ಸ್ಥಳೀಯ ಮುಖಂಡರು ಹಾಗೂ ಸಾರ್ವಜನಿಕರು ನೂತನ ಅಧ್ಯಕ್ಷರಿಗೆ ಅಭಿನಂದನೆ ಸಲ್ಲಿಸಿದರು. ಅವರ ನೇತೃತ್ವದಲ್ಲಿ ತುರ್ವಿಹಾಳ ಪಟ್ಟಣದ ಮೂಲಭೂತ ಸೌಕರ್ಯಗಳ ಅಭಿವೃದ್ಧಿ, ಸ್ವಚ್ಛತೆ, ಕುಡಿಯುವ ನೀರು, ರಸ್ತೆ, ಚರಂಡಿ, ಬೀದಿ ದೀಪ ಸೇರಿದಂತೆ ಸಾರ್ವಜನಿಕರಿಗೆ ಅಗತ್ಯವಿರುವ ವಿವಿಧ ಸೌಲಭ್ಯಗಳಿಗೆ ಹೆಚ್ಚಿನ ಆದ–್ಯತೆ ದೊರೆಯಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಶರಣಪ್ಪ ಹೊಸಗೌಡ್ರು ಅವರು ಎಲ್ಲ ಸದಸ್ಯರು ಹಾಗೂ ಮುಖಂಡರ ಸಹಕಾರದೊಂದಿಗೆ ಪಟ್ಟಣದ ಸಮಗ್ರ ಅಭಿವೃದ್ಧಿಗೆ ಶ್ರಮಿಸುವುದಾಗಿ



ತಿಳಿಸಿದರು. ಪಕ್ಷಾತೀತವಾಗಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಪಟ್ಟಣ ಪಂಚಾಯಿತಿಯ ಅಭಿವೃದ್ಧಿ ಕಾರ್ಯಗಳನ್ನು ಪರಿಣಾಮಕಾರಿಯಾಗಿ ಕೈಗೊಳ್ಳುವುದಾಗಿ ಅವರು ಭರವಸೆ ನೀಡಿದರು. ಶರಣಪ್ಪ ಹೊಸಗೌಡ್ರು ಅವರ ಅವಿರೋಧ ಆಯ್ಕೆಗೆ ಮಸ್ಕಿ ಶಾಸಕ ಶ್ರೀ ಬಸನಗೌಡ ತುರವಿಹಾಳ ಅವರು ಅಭಿನಂದನೆ ಸಲ್ಲಿಸಿದ್ದಾರೆ. ಇದೇ ವೇಳೆ ಪಟ್ಟಣ ಪಂಚಾಯಿತಿ ಸದಸ್ಯರು, ವಿವಿಧ ಪಕ್ಷಗಳ ಮುಖಂಡರು, ಗಣ್ಯರು ಹಾಗೂ ಸಾರ್ವಜನಿಕರು ಶುಭಾಶಯ ಕೋರಿದ್ದಾರೆ.

ನೂತನ ಅಧ್ಯಕ್ಷರ ಅವಿರೋಧ ಆಯ್ಕೆಯ ಹಿನ್ನೆಲೆಯಲ್ಲಿ ತುರ್ವಿಹಾಳ ಪಟ್ಟಣದಲ್ಲಿ ಅವರ ಬೆಂಬಲಿಗರು ಹಾಗೂ ಅಭಿಮಾನಿಗಳಲ್ಲಿ ಸಂತಸ ವ್ಯಕ್ತವಾಗಿದೆ.

# ಮುಖ್ಯಾಧಿಕಾರಿ ವಸಂತ ಪವಾರಗೆ ಹೃದಯಸ್ಪರ್ಶಿ ಬೀಳ್ಕೊಡುಗೆ

❏ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಪಟ್ಟಣದ ಪುರಸಭೆಯಲ್ಲಿ ಒಂದು ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿ ಇದೀಗ ವರ್ಗಾವಣೆಗೊಂಡಿರುವ ಮುಖ್ಯಾಧಿಕಾರಿ ವಸಂತ ಪವಾರ ಇವರನ್ನು ಸಿಬ್ಬಂದಿ ವರ್ಗದವರು ಸನ್ಮಾನಿಸಿ ಬೀಳ್ಕೊಟ್ಟರು.

ಪುರಸಭೆ ಕಾರ್ಯಾಲಯದಲ್ಲಿ ಗುರುವಾರ ಹಮ್ಮಿಕೊಂಡ ಬೀಳ್ಕೊಡುವ ಕಾರ್ಯಕ್ರಮದಲ್ಲಿ ಸಿಬ್ಬಂದಿ ವರ್ಗದವರ ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದ ಮುಖ್ಯಾಧಿಕಾರಿ ವಸಂತ ಪವಾರ ಅವರು, ನನ್ನ ಈ ಒಂದು ವರ್ಷದ ಸೇವಾವಧಿಯಲ್ಲಿ ತಾವೆಲ್ಲರೂ ನನಗೆ ಎಲ್ಲ ರೀತಿಯಿಂದಲೂ



ಸಹಕರಿಸಿದ್ದೀರಿ. ಇದೇ ರೀತಿಯಾಗಿ ಇಲ್ಲಿಯ ಜನಪ್ರತಿನಿಧಿಗಳು, ಪತ್ರಕರ್ತರು, ಮುಖಂಡರು, ವಿವಿಧ ಸಂಘ ಸಂಸ್ಥೆಗಳ ಮುಖ್ಯಸ್ಥರು ಹಾಗೂ ಸಾರ್ವಜನಿಕರು ನಾನು ನನ್ನ ಸೇವೆಯನ್ನು ದಕ್ಷವಾಗಿ ನಿರ್ವಹಿಸುವಲ್ಲಿ ಬಹಳಷ್ಟು ಸಹಕಾರವನ್ನು ನೀಡಿದ್ದಾರೆ ಅವರೆಲ್ಲರಿಗೂ ನಾನು ಕೃತಜ್ಞನಾಗಿದ್ದೇನೆ. ನನ್ನ ಈ ಒಂದು ವರ್ಷದ ಅವಧಿಯಲ್ಲಿ ಈ ಪಟ್ಟಣ ನನಗೆ ಕೇವಲ ಸೇವೆಯ ಒಂದು ಸ್ಥಳವಾಗಿರಲಿಲ್ಲ, ನನಗೆ ಇಲ್ಲಿ ಸಾಕಷ್ಟು ಅನುಭವವೂ ಸಿಕ್ಕಿದೆ ಇದನ್ನು ನಾನೆಂದೂ ಮರೆಯಲಾರೆ.

ಸೇವಾ ಅವಧಿಯಲ್ಲಿ ನನ್ನಿಂದ ನಿಮಗೆ ಏನಾದರೂ ತೊಂದರೆ, ನೋವು ಆಗಿದ್ದಲ್ಲಿ ನನ್ನನ್ನು ಕ್ಷಮಿಸಿ ಎಂದು ನಿಮ್ಮಲ್ಲಿ ವಿನಂತಿಸುತ್ತೇನೆ ಎಂದು ಹೇಳಿ ಭಾವುಕರಾದರು. ಈ ಸಮಯದಲ್ಲಿ ಪುರಸಭೆಯ ಸಿಬ್ಬಂದಿ ವರ್ಗದವರಾದ ಎಸ್ ಎಸ್ ಇಂಜಿಗನೇರಿ, ಸುರೇಶ ಅಮರಣ್ಣವರ, ಶ್ರೀಪಾದ ಜೋಶಿ, ಎಸ್ ಡಿ ಪಾಟೀಲ, ಸಿದ್ದಲಿಂಗ ಚೊಂಡಿಪಾಟೀಲ, ಇಬ್ರಾಹೀಂ ಮಕಾನದಾರ, ಶಂಕರಗೌಡ ಪಾಟೀಲ, ನಾಗರಾಜ ಪತ್ತಾರ,ಸಿ. ಬಿ.ಜಾನ್ವೇಕರ, ಶ್ರೀಶೈಲ ಶಿರೋಳ, ಮುತ್ತು ಕಟ್ಟಿಮನಿ ಮತ್ತೀತರರು ಇದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಹೊಕ್ರಾಣಿ ಗ್ರಾಮದ ಯುವತಿ ಅನುಮಾನಾಸ್ಪದ ಸಾವು! ತನಿಖೆಗೆ ದಲಿತ ವಿದ್ಯಾರ್ಥಿ ಪರಿಷತ್ ಒತ್ತಾಯ

❏ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ರಾಯಚೂರು ಜಿಲ್ಲೆ ಸಿರವಾರ ತಾಲೂಕಿನ ಹೊಕ್ರಾಣಿ ಗ್ರಾಮದ ಯುವತಿ ಅಶ್ವಿನಿಯ ಅನುಮಾನಾಸ್ಪದ ಸಾವು, ಅತ್ಯಾಚಾರ, ಕೊಲೆ ಆರೋಪ ನಿಷ್ಪಕ್ಷಪಾತ ತನಿಖೆಗೆ ತಾಲೂಕು ದಲಿತ ವಿದ್ಯಾರ್ಥಿ ಪರಿಷತ್ ವತಿಯಿಂದ ತಹಶೀಲ್ದಾರ್ ಮುಖಾಂತರ ರಾಜ್ಯದ ಮುಖ್ಯಮಂತ್ರಿಗಳಿಗೆ ಹಾಗೂ ಗೃಹ ಸಚಿವರಿಗೆ ಮನವಿ ಸಲ್ಲಿಸಿ ಆಗ್ರಹಿಸಲಾಯಿತು.

ಗ್ರೇಡ್ 2 ಅಧಿಕಾರಿಯಾದ ಅಂಬಾದಾಸ್ ಅವರಿಗೆ ಮನವಿ ಸಲ್ಲಿಸಿ ನಂತರ ಪರಿಷತ್ ಮುಖಂಡರು ಮಾತನಾಡಿ, ಈ ದೇಶಕ್ಕೆ ಸ್ವಾತಂತ್ರ್ಯ ಬಂದು 80 ವರ್ಷಗಳೇ ಕಳೆದವು ಆದರೆ ದಲಿತರಿಗೆ ನಿಜವಾದ ಸ್ವಾತಂತ್ರ ದಕ್ಕದಿರುವುದು ವಿಪರ್ಯಾಸವೇ ಸರಿ. ಈ ನೆಲದ ಮೇಲೆ ಬದುಕಲು ಜೀವನ್ಮರಣದ ಹೋರಾಟವೇ ಪ್ರತಿದಿನದ ಸವಾಲಾಗಿದೆ. ಒಂದೆಡೆ



ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು ವಿಜಯೋತ್ಸವ ಆಚರಿಸುವ ಸಂಭ್ರಮದಲ್ಲಿ ದೇಶವೇ ಮುಳುಗಿದೆ. ಮತ್ತೊಂದೆಡೆ ಈ ವರ್ಷವಾದರೂ ಅಸಮಾನತೆಯಿಂದ, ದೌರ್ಜನ್ಯದಿಂದ,ತಾರತಮ್ಯದಿಂದ,ಅತ್ಯಾಚಾರದಿಂದ, ಕ್ರೌರ್ಯದಿಂದ ಬಿಡುಗಡೆಗೊಳ್ಳುವ, ಮುಕ್ತಿ ಹೊಂದುವ ನಿಜವಾದ ಸ್ವಾತಂತ್ರ್ಯ ದಿನ ನಮಗಾಗಿ ಬರಬಹುದೇ ಎನ್ನುವ ಆಶಾ ಭಾವನೆಯಿಂದ ಕಾಯುತ್ತಿರುವ ಮುಗ್ಧ ಜನತೆಯನ್ನು ಕಾಣಬಹುದು.

ರಾಯಚೂರು ಜಿಲ್ಲೆಯು ಇತ್ತೀಚೆಗೆ ದಲಿತ–ರಿಗೆ ರಕ್ಷಣೆ ಇಲ್ಲದ ನಾಡಾಗಿ ಪರಿವರ್ತನೆಯಾಗಿದೆ. ಹಾಗೂ ನಮ್ಮ ಜಿಲ್ಲೆಯಲ್ಲಿ ಪ್ರತಿ ದಿನ ಕೊಲೆ, ಸುಲಿಗೆ, ದೌರ್ಜನ್ಯ ಮತ್ತು ಅತ್ಯಾಚಾರ ಪ್ರಕರಣಗಳು ಹೆಚ್ಚಾಗಿ ಕಂಡುಬರುತ್ತಿದ್ದು, ಇದರಿಂದ ಜನರು ಜೀವ ಭಯದಲ್ಲಿ ಬದುಕುವಂತಹ ಆಘಾತಕಾರಿ ಹಾಗೂ ಆತಂಕಕಾರಿ ನಿರ್ಮಾಣ ಪರಿಸ್ಥಿತಿ ಎದುರಾಗಿದೆ. ಹೊಕ್ರಾಣಿ ಗ್ರಾಮದ ಚಲುವಾದಿ ಸಮುದಾಯಕ್ಕೆ ಸೇರಿದ ಕು.ಅಶ್ವಿನಿ, (22) ತಿಪ್ಪಾರೆಡ್ಡಿ ಅವರ ಪುತ್ರಿ ಈ ಯುವತಿ ಅನುಮಾನಾಸ್ಪದವಾಗಿ ಮೃತಪಟ್ಟಿರುವ ಘಟನೆ ಜಿಲ್ಲೆಯಲ್ಲಿ ಮತ್ತೆ ರಾಜ್ಯದಲ್ಲಿ ಗಂಭೀರ ಸ್ವರೂಪದ ಪ್ರಕರಣವಾಗಿದೆ. ಬಯಲು ಶೌಚಕ್ಕೆ ತೆರಳಿದ್ದ ಸಂದರ್ಭದಲ್ಲಿ ಯುವತಿಯ ಮೇಲೆ ಅತ್ಯಾಚಾರ ಎಸಗಿ, ಬಳಿಕ ಕೊಲೆ ಮಾಡಿ ಬಾವಿಗೆ ಎಸೆದಿರುವ ಆರೋಪವನ್ನು ಕುಟುಂಬಸ್ಥರು ಹಾಗೂ ಹೋರಾಟಗಾರರು ಮುಂದಿಟ್ಟಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಸಮಗ್ರ ತನಿಖೆ ನಡೆಸಿ, ನಿಜಾಂಶವನ್ನು ಹೊರತರಬೇಕೆಂಬ ಒತ್ತಾಯಿಸಿದರು. ಈ ಪ್ರಕರಣದಲ್ಲಿ ಭಾಗಿಯಾಗಿರುವ ಎಲ್ಲಾ ಆರೋಪಿಗಳನ್ನು ಹಾಗೂ ತಪ್ಪಿತಸ್ಥರು ಯಾರೇ ಆಗಿದ್ದರೂ ಅವರ ವಿರುದ್ಧ ಸೂಕ್ತ ಕಾನೂನು ಬದ್ಧವಾಗಿ ಕಠಿಣ ಕ್ರಮ ಕೈಗೊಳ್ಳಬೇಕು. ಸಂತ್ರಸ್ತ ಕುಟುಂಬಕ್ಕೆ ನ್ಯಾಯ ಒದಗಿಸುವುದರ ಜೊತೆಗೆ, ಕುಟುಂಬಕ್ಕೆ ಸೂಕ್ತ ರಕ್ಷಣೆ ಮತ್ತು ಅಗತ್ಯ ಪರಿಹಾರ ನೀಡಬೇಕು ಎಂದು ದಲಿತ ವಿದ್ಯಾರ್ಥಿ ಪರಿಷತ್ ವತಿಯಿಂದ ಆಗ್ರಹಿಸಿದರು.

ಈ ಸಂದರ್ಭದಲ್ಲಿ: ತಾಲೂಕು ಅಧ್ಯಕ್ಷರಾದ ದುರ್ಗೇಶ ಕಲಮಂಗಿ, ನರಸಪ್ಪ ಬಡಿಗೇರ್, ಮೌನೇಶ ತುಗ್ಗಲದಿನ್ನಿ, ಶರಣಬಸವ ಕಲಮಂಗಿ, ಉಮೇಶ ಸುಕಾಲಪೇಟೆ, ಅಫ್ಜಲ್ ಕಲಮಂಗಿ, ಯಲ್ಲಪ್ಪ, ವಿದ್ಯಾರ್ಥಿನಿಯರಾದ ಸಂಜನಾ, ಮನ್ವಿತಾ, ಸೌಮ್ಯ, ಜ್ಯೋತಿ, ಗೌಶಿಯ, ಸಲ್ಮಾ, ಅಬ್ಬಾಸಲಿ, ಉಮಾಪತಿ, ಬಸನಗೌಡ, ಮಲ್ಲಿಕಾರ್ಜುನ, ಸುರೇಶ, ಸೇರಿದಂತೆ ಹಲವಾರು ವಿದ್ಯಾರ್ಥಿಗಳು ಮುಖಂಡರು ಭಾಗವಹಿಸಿದ್ದರು.

## ವಚನ ದರ್ಶನ –5.

ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ ಮುನಿಯಬೇಡ ಅನ್ಯರಿಗೆ ಅಸಹ್ಯಪಡಬೇಡ ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ. ಇದೇ ಅಂತರಂಗಶುದ್ಧಿ ಇದೇ ಬಹಿರಂಗಶುದ್ಧಿ ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ.

12ನೇ ಶತಮಾನದಲ್ಲಿ ಬಸವಣ್ಣನವರು , ಅಲ್ಲಮಪ್ರಭುಗಳು, ಅಕ್ಕಮಹಾದೇವಿ ಮುಕ್ತಾಯಕ್ಕ ಮಾದಾರ ಚನ್ನಯ್ಯ ಡೋಹರ ಕಕ್ಕಯ್ಯ ನೂಲಿನ ಚಂದಯ್ಯ ಮೇದಾರ ಕೇತಯ್ಯ ಅಂಬಿಗರ ಚೌಡಯ್ಯ ಮುಂತಾದ ಶರಣರಿಂದ ವಚನ ಸಾಹಿತ್ಯವು ಬೆಳೆಯಿತು. ಇದು ಸಂಸ್ಕೃತದ ಕಟ್ಟುಪಾಡುಗಳನ್ನು ಮೀರಿ, ಸಾಮಾನ್ಯ ಜನರ ಆಡುಭಾಷೆಯಲ್ಲಿ ಮೂಡಿಬಂದ, ಅನುಭಾವ ಹಾಗೂ ಸಾಮಾಜಿಕ ಸಮಾನತೆಯನ್ನು ಸಾರುವ ವಿಶಿಷ್ಟ ಗದ್ಯ–ಪದ್ಯ ರೂಪದ ಸಾಹಿತ್ಯ ಪ್ರಕಾರವಾಗಿದೆ.

ಕಳಬೇಡ ಕೊಲಬೇಡ ಎಂಬುದು 12ನೇ ಶತಮಾನದ ಸಾಮಾಜಿಕ ಕ್ರಾಂತಿಕಾರಿ ಮತ್ತು ಮಹಾ ಶಿವಶರಣರಾದ ಬಸವಣ್ಣನವರ ಅತ್ಯಂತ ಪ್ರಸಿದ್ಧವಾದ ವಚನವಾಗಿದೆ.ಈ ವಚನವು ಮಾನವನ ನೈತಿಕ ಮತ್ತು ಆಧ್ಯಾತ್ಮಿಕ ಜೀವನಕ್ಕೆ ದಿಕ್ಸೂಚಿಯಂತಿದೆ. ಸಂಪೂರ್ಣ ವಚನ ಮತ್ತು ಅದರ ಸರಳ ಭಾವಾರ್ಥ ಇಲ್ಲಿದೆ.

ಈ ವಚನದಲ್ಲಿ ಬಸವಣ್ಣನವರು ಮನುಷ್ಯನ ವ್ಯಕ್ತಿತ್ವ ವಿಕಸನಕ್ಕೆ ಮತ್ತು ಸಮಾಜದಲ್ಲಿ ಶಾಂತಿಯಿಂದ ಬದುಕಲು ಏಳು ಪ್ರಮುಖ ನಿಯಮಗಳನ್ನು ಅಂತರಂಗ–ಬಹಿರಂಗ ಶುದ್ಧಿಯ ಮೂಲಕ ವಿವರಿಸಿದ್ದಾರೆ. ಕಳಬೇಡ ಕದಿಯಬೇಡ ಇತರರ ವಸ್ತು, ಶ್ರಮ ಅಥವಾ ಹಕ್ಕನ್ನು ಅನ್ಯಾಯವಾಗಿ ಕಸಿದುಕೊಳ್ಳಬೇಡ.ಕೊಲಬೇಡಕೊಲ್ಲಬೇಡ ಯಾವುದೇ ಜೀವಿಗೆ ಹಿಂಸೆ ಮಾಡಬೇಡ, ಯಾರ ಪ್ರಾಣವನ್ನೂ ತೆಗೆಯಬೇಡ.ಹುಸಿಯ ನುಡಿಯಲು ಬೇಡ ಸುಳ್ಳು ಹೇಳಬೇಡ ಸದಾ ಸತ್ಯವನ್ನೇ ಮಾತನಾಡು, ವಂಚನೆಯ ಮಾತುಗಳನ್ನಾಡಬೇಡ. ಮುನಿಯಬೇಡ ಕೋಪಿಸಿಕೊಳ್ಳಬೇಡ ಸಿಟ್ಟು ಅಥವಾ ಕ್ರೋಧಕ್ಕೆ ಒಳಗಾಗಬೇಡ, ಸಮಾಧಾನದಿಂದ ಇರು.ಅನ್ಯರಿಗೆ ಅಸಹ್ಯಪಡಬೇಡ ಇತರರನ್ನು ದ್ವೇಷಿಸಬೇಡ. ಬೇರೆಯವರನ್ನು ಕೀಳಾಗಿ ಕಾಣಬೇಡ, ಯಾರ ಮೇಲೂ ಅಸಹ್ಯ ಅಥವಾ ದ್ವೇಷ ಸಾಧಿಸಬೇಡ.ತನ್ನ ಬಣ್ಣಿಸಬೇಡ ನಿನ್ನನ್ನು ನೀನೇ ಹೊಗಳಿಕೊಳ್ಳಬೇಡ. ಅಹಂಕಾರ ಪಡಬೇಡ, ನಿನ್ನ ಸ್ವಪ್ರಶಂಸೆಯನ್ನು ನೀನೇ ಮಾಡಿಕೊಳ್ಳಬೇಡ.ಇದಿರ ಹಳಿಯಲು ಬೇಡ ಎದುರಿಗಿರುವವರನ್ನು ನಿಂದಿಸಬೇಡ. ಇತರರ ದೋಷಗಳನ್ನು ಹುಡುಕುತ್ತಾ ಅವರನ್ನು ಅವಮಾನಿಸಬೇಡ. ಬಸವಣ್ಣನವರ ಪ್ರಕಾರ, ಈ ಮೇಲಿನ ನೈತಿಕ ಸೂತ್ರಗಳನ್ನು ಪಾಲಿಸುವುದೇ ಅಂತರಂಗಶುದ್ಧಿ ಮನಸ್ಸಿನ ಪವಿತ್ರತೆ ಮತ್ತು ಬಹಿರಂಗಶುದ್ಧಿ ನಡತೆಯ ಪವಿತ್ರತೆ ವಚನ ಸಂಪುಟ. ಕೇವಲ ಬಾಹ್ಯವಾಗಿ ಪೂಜೆ–ಪುನಸ್ಕಾರಗಳನ್ನು ಮಾಡುವುದರಿಂದ ದೇವರನ್ನು ಒಲಿಸಿಕೊಳ್ಳಲು ಸಾಧ್ಯವಿಲ್ಲ; ಬದಲಿಗೆ ನಮ್ಮ ನಡತೆ ಮತ್ತು ಆಲೋಚನೆಗಳು ಶುದ್ಧವಾಗಿದ್ದಾಗ ಮಾತ್ರ ಸೃಷ್ಟಿಕರ್ತನಾದ ಕೂಡಲಸಂಗಮದೇವನನ್ನು ಒಲಿಸಿಕೊಳ್ಳಲು ಸಂತೋಷಪಡಿಸಲು ಸಾಧ್ಯ ಎಂದು ಅವರು ಸಾರಿದ್ದಾರೆ. ನಾವು ನೀವು ಬಸವಾದಿ ಶರಣರ ವಚನ ಪಚನಮಾಡಿಕೊಳ್ಳೋಣ ಸರ್ವರಿಗೂ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ
ಅಂತರಗಂಗಿ–ಸಿಂಧನೂರು. 998094144

## ಭಾರತ್ ಜೋಡೋ ಯುವ ಸಂಘಗಳ ನೋಂದಣಿಗೆ ಕರೆ

**ನೈಜ್ಯ ದೆಸೆ ನ್ಯೂಸ್**

**ಕುಷ್ಟಗಿ: ರಾಜ್ಯ ಸರ್ಕಾರ ಯುವಜನರಿಗಾಗಿ ಜಾರಿಗೆ ತರುತ್ತಿರುವ *'ಭಾರತ್ ಜೋಡೋ ಯುವ ಸಂಘ'*ಗಳ ನೋಂದಣಿ ಕುರಿತು ದಿಶಾ ಸಮಿತಿ ಸದಸ್ಯರಾದ ದೊಡ್ಡಬಸನಗೌಡ ಪಾಟೀಲ್ ಬಯ್ಯಾಪೂರ ಅವರು ಹನಮಸಾಗರದ ಯುವ ಮಿತ್ರರೊಂದಿಗೆ ಚರ್ಚೆ ನಡೆಸಿದರು.**



ಯುವಜನರಲ್ಲಿ ನಾಯಕತ್ವದ ಗುಣ, ಸಾಮಾಜಿಕ ಹೊಣೆಗಾರಿಕೆ, ಸಾಮರಸ್ಯ, ಕ್ರೀಡಾ ಮನೋಭಾವ ಹಾಗೂ ಸಮುದಾಯ ಸೇವೆಯ ಮನೋಭಾವ ಬೆಳೆಸುವ ಉದ್ದೇಶದಿಂದ ಭಾರತ್ ಜೋಡೋ ಯುವ ಸಂಘಗಳನ್ನು ಸ್ಥಾಪಿಸಲಾಗುತ್ತಿದೆ. ಇದರ ಮೂಲಕ ಯುವಜನರಿಗೆ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಹಾಗೂ ತಮ್ಮ ಪ್ರತಿಭೆ ಮತ್ತು ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ಅವಕಾಶ ಕಲ್ಪಿಸಲಾಗುತ್ತಿದೆ ಎಂದು ಅವರುತಿಳಿಸಿದರು. ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಯುವಜನರ ಸಬಲೀಕರಣಕ್ಕೆ ಹೆಚ್ಚಿನ ಒತ್ತು ನೀಡುತ್ತಿದ್ದು, ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾರತ್ ಜೋಡೋ ಯುವ ಸಂಘಗಳಿಗೆ ನೋಂದಣಿಯಾಗಬೇಕು.

ಸಂಘದ ಉದ್ದೇಶ ಹಾಗೂ ಸರ್ಕಾರದಿಂದ ದೊರೆಯುವ ಸೌಲಭ್ಯಗಳ ಕುರಿತು ಯುವಜನರಲ್ಲಿ ಜಾಗೃತಿ ಮೂಡಿಸಿ, ಹೆಚ್ಚಿನ ಸಂಖ್ಯೆಯಲ್ಲಿ ನೋಂದಣಿ ಮಾಡಿಸಲು ಮುಂದಾಗಬೇಕು ಎಂದು ದೊಡ್ಡಬಸನಗೌಡ ಬಯ್ಯಾಪೂರ ಪಾಟೀಲ್ ಸೂಚಿಸಿದರು. ಈ ಸಂದರ್ಭದಲ್ಲಿ ತಾಲೂಕು ಸಾಮಾಜಿಕ ಜಾಲತಾಣದ ಅಧ್ಯಕ್ಷ ವಿರೇಶ ಬಿ.ಟಿ., ತಾಲೂಕು ಗ್ಯಾರಂಟಿ ಸಮಿತಿ ಸದಸ್ಯ ಫಾರೂಕ್ ಡಾಲಾಯತ, ಹನಮಸಾಗರ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ಕರಿಸಿದ್ದಪ್ಪ ಪಟ್ಟಣಶೆಟ್ಟಿ, ಪ್ರವೀಣ್, ಕಳಕಪ್ಪ ನಿರ್ವಾಣಿ, ಯಮನೂರ ನಾಯಕ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಅಶ್ವಿನಿ ಸಾವು ಖಂಡಿಸಿ ಛಲವಾದಿ ಮಹಾಸಭಾ ಹಾಗೂ ಜೈ ಭೀಮ ಸಂಘಟನೆಯಿಂದ ಪ್ರತಿಭಟನೆ

**ನೈಜ್ಯ ದೆಸೆ ನ್ಯೂಸ್**

**ಸಿಂಧನೂರು: ಸಿರವಾರ ತಾಲೂಕಿನ ಹೊಕ್ರಾಣಿ ಗ್ರಾಮದ ಕು.ಅಶ್ವಿನಿ ಆ.19ರಂದು ತಡರಾತ್ರಿ ಬರ್ಹಿದೆಸೆಗೆ ಹೋದಾಗ ಕಿರಾತಕರು ಅತ್ಯಾಚಾರ ಮಾಡಿ ಕೊಂದು ನಂತರ ಊರ ಮುಂದಿನ ಬಾವಿಯೊಳಗೆ ಎಸೆದು ಹೋದ ಘಟನೆ ಜರುಗಿದ್ದು, ಇದು ನಾಗರಿಕ ಸಮಾಜ ತಲೆ ತಗ್ಗಿಸುವಂತಹ ನೀಚ ಕೆಲಸವಾಗಿದೆ ಎಂದು ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾದ ತಾಲೂಕು ಅಧ್ಯಕ್ಷ ಅಯ್ಯಪ್ಪ ವಕೀಲರು ಮಲ್ಲಾಪುರ ಆರೋಪಿಸಿದರು.**

ನಗರದ ತಹಶೀಲ್ದಾರ್ ಆವರಣದಲ್ಲಿ ಜೈ ಭೀಮ್ ಮತ್ತು ಛಲವಾದಿ ಮಹಾಸಭಾದಿಂದ ಪ್ರತಿಭಟನೆ ಹಮ್ಮಿಕೊಂಡು ಮಾತನಾಡಿದ ಅವರು, ಇಂತಹ ಹೀನ ಕೃತ್ಯ ಎಸಗಿದವರನ್ನು ಪೊಲೀಸರು ಹುಡುಕಿ ಗಲ್ಲು ಶಿಕ್ಷೆ ವಿಧಿಸಬೇಕು. ಇಲ್ಲದಿದ್ದರೆ ಮುಂದೆ ನೀಚ ಕೃತ್ಯ ಎಸಗುವವರಿಗೆ ಯಾವುದೇ ಅಂಜಿಕೆ ಇಲ್ಲವಾಗುತ್ತದೆ. ಜೊತೆಗೆ ಅತ್ಯಾಚಾರಕ್ಕೆ ಹೀಡಾದ ಅಶ್ವಿನಿ ಕುಟುಂಬಕ್ಕೆ ಸರ್ಕಾರ 50 ಲಕ್ಷ ಪರಿಹಾರ ಒದಗಿಸಬೇಕು ಎಂದರು.

ಜೈ ಭೀಮ್ ಸಂಘಟನೆಯ ಮುಖಂಡ ನಿರುಪಾದಿ ಸಾಸಲಮರಿ ಮಾತನಾಡಿ, ಚಲುವಾದಿ, ಮಾದಿಗ, ಹಾಗೂ ಹಿಂದುಳಿದ ಜನಾಂಗವನ್ನು ಈಗಲೂ ಸಹ ತುಳಿಯುತ್ತಲೆ ಇದ್ದಾರೆ, ಹಳ್ಳಿಗಳಲ್ಲಿ ನಮಗೆ ಈಗಲೂ ಕೂಡ ಹೊಟೇಲ್ ಗಳಲ್ಲಿ ಪ್ರವೇಶವಿಲ್ಲ, ಕಟಿಂಗ್ ಶಾಪ್ ನಲ್ಲಿ ಪ್ರವೇಶವಿಲ್ಲ, ಕುಡಿಯುವ ನೀರಿನ ಕೆರೆಗೆ ಪ್ರವೇಶವಿಲ್ಲ, ಇಂತಹ ಪರಿಸ್ಥಿತಿಯಲ್ಲ ನಮ್ಮ ಸಮಾಜ ಬದುಕುತ್ತಿದೆ. ಪೊಲೀಸ್ ಇಲಾಖೆ ಕುಂದು–ಕೊರತೆ ಸಭೆ ನೆಪದಲ್ಲಿ ನಾಲ್ಕೈದು ಜನರನ್ನು ನಿಲ್ಲಿಸಿ, ಪೋಟೋ ತೆಗೆದುಕೊಂಡು ಬಂದು, ಹಳ್ಳಿಯಲ್ಲಿ ನಾವು ಸಭೆ ಮಾಡಿದ್ದೇವೆ ಹೇಳುತ್ತಾರೆ ಇದಾಗಬಾರದು.

ಹೊಕ್ರಾಣಿ ಗ್ರಾಮದ ಅಶ್ವಿನಿ ಅನುಮಾನಾಸ್ಪದವಾಗಿ ಸಾವಿಗೀಡಾಗಿದ್ದನ್ನ ಖಂಡಿಸಲು ನಮ್ಮ ಸಮಾಜ ದ ಮುಖಂಡರು ಪ್ರತಿಭಟನೆಗೆ ಕುಳಿತರೆ ಎರಡ್ಮೂರು ತಾಸಿನ ಬಳಿಕ ಜಿಲ್ಲಾಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ತಡವಾಗಿ ಬರುತ್ತಾರೆ. ಏಕೆ? ನಮ್ಮ ಸಮಾಜದ ಹೆಣ್ಣುಮಗಳು ಸಾವನ್ನಪ್ಪಿದರೆ ಬೆಲೆಯಿಲ್ಲವೆ? ಮೂರು ಪಕ್ಷದ




ಜನಪ್ರತಿನಿಧಿಗಳು ಅಶ್ವಿನಿ ಕುಟುಂಬಕ್ಕೆ ಒಂದು ಸಾಂತ್ವಾನ ಹೇಳಲಿಕ್ಕೆ ಆಗದಷ್ಟು ಬಿಜಿ ಇದ್ದು ನಿರ್ಲಕ್ಷ್ಯ ಮಾಡಿದ್ದಾರೆ ಎಂದರೆ ಸಮಾಜದ ಬಂಧುಗಳೆ ಅರ್ಥಮಾಡಿಕೊಳ್ಳಬೇಕು ಎಂದರು.

ನಂತರ ಬಿ.ಎನ್.ಯರದಿಹಾಳ, ಸೋಮಲಾಪುರ ಸಿದ್ದನಗೌಡ, ವೀರೇಶ ಸುಲ್ತಾನಪುರ, ಹುಲುಗಪ್ಪ ಮಲ್ಕಾಪುರ, ಸೇರಿದಂತೆ ಅನೇಕ ಸಮಾಜದ ಮುಖಂಡರು ಅಶ್ವಿನಿ ಅತ್ಯಾಚಾರವನ್ನು ಖಂಡಿಸಿ, ಕಾಮುಕರಿಗೆ ಗಲ್ಲು ಶಿಕ್ಷೆ, ಇಲ್ಲವೆ ಎನ್ಕೌಂಟರ್ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿದರು. ಈ ವೇಳೆ: ಎಚ್.ಎಫ್.ಮಸ್ಕಿ, ಮಾರೆಪ್ಪ ರಾಮತ್ನಾಳ್, ಅಂಬಣ್ಣ ಮಲ್ಲಾಪುರ, ಆನಂದ ಸೋಮಲಾಪುರ, ಹನುಮಂತ, ಮಹಾಂಕಾಳೆಪ್ಪ ಮಲ್ಲಾಪುರ, ಚನ್ನಪ್ಪ, ಭೀಮೇಶ ಸಾಸಲಮರಿ, ಮೌನೇಶ, ದುರುಗಪ್ಪ, ಸಣ್ಣಬಸವ, ಬಸವರಾಜ, ಶರಣಬಸವ, ಶಂಕ್ರಪ್ಪ, ಮೌಲಾಲಿ, ಗುರುಪುತ್ರ, ವೀರೇಶ, ಹುಚ್ಚಪ್ಪ, ಅಂಬಣ್ಣ, ಮರಿಸ್ವಾಮಿ, ಶರಣಪ್ಪ, ಭೀಮಣ್ಣ, ಲಿಂಗಪ್ಪ, ಪಂಪಾಪತಿ, ಏಸುರಾಜ, ಸೇರಿದಂತೆ ಅನೇಕರಿದ್ದರು.

## ಇಂದು ಪಟ್ಟಣದಲ್ಲಿ ಮಳೆಗಾಗಿ ಮಳೆ ಕವಿಗೋಷ್ಠಿ

**ನೈಜ್ಯ ದೆಸೆ ನ್ಯೂಸ್**

**ಬಳ್ಳಾರಿ / ಕಂಪ್ಲಿ : ಸಮೃದ್ಧ ಮಳೆ, ಬೆಳೆಗಾಗಿ ಆಶಿಸಿ ಇದೇ ಮೊದಲ ಬಾರಿಗೆ ಪಟ್ಟಣದ ಸಾಹಿತ್ಯ ಸಿರಿ ಪ್ರತಿಷ್ಠಾನವು ಆ.22ರಂದು ಸಂಜೆ 5ಗಂಟೆಗೆ ಶ್ರೀ ವಾಸವಿ ಕನ್ನಡ ಹಿರಿಯ ಪ್ರಾಥಮಿಕ ಅನುದಾನಿತ ಶಾಲಾವರಣದಲ್ಲಿ ಮಳೆ ಕವಿಗೋಷ್ಠಿ ಹಮ್ಮಿಕೊಂಡಿದೆ.**




ಬಳ್ಳಾರಿಯ ಬಾಲಕಿಯರ ಸರ್ಕಾರಿ ಪಿಯು ಕಾಲೇಜಿನ ಉಪನ್ಯಾಸಕ ಡಾ.ಯು.ಶ್ರೀನಿವಾಸಮೂ ರ್ತಿ ಕವಿಗೋಷ್ಠಿಯ ಅಧ್ಯಕ್ಷತೆವಹಿಸಲಿದ್ದು, ಶ್ರೀ ವಾಸವಿ ವಿದ್ಯಾಸಂಸ್ಥೆಯ ಅಧ್ಯಕ್ಷ ಜಿ.ರಾಜಾರಾವ್ ಉದ್ಘಾಟಿಸಲಿದ್ದಾರೆ. ಸಂಸ್ಥೆಯ ನಿಕಟಪೂರ್ವ ಅಧ್ಯಕ್ಷ ಡಿ.ಶ್ರೀಧರಶ್ರೇಷ್ಠಿ, ಸಾಹಿತ್ಯ ಪ್ರತಿಷ್ಠಾನದ ಅಧ್ಯಕ್ಷ ಜಿ.ಪ್ರಕಾಶ್, ಕಾರ್ಯಾಧ್ಯಕ್ಷ ಷಣ್ಮುಖಪ್ಪ ಚಿತ್ರಗಾರ್ ಪಾಲ್ಗೊಳ್ಳಲಿದ್ದಾರೆ. ತಾಲೂಕಿನ ಕವಿಗಳು ಮಳೆ ಕವಿಗೋಷ್ಠಿಯಲ್ಲಿ ಕವಿತೆ ವಾಚಿಸಲಿದ್ದಾರೆ. ಕವಿಗೋಷ್ಠಿಯಲ್ಲಿ ಪಾಲ್ಗೊಳ್ಳಲಿಚ್ಛಿಸುವ ಆಸಕ್ತ ಕವಿಗಳು ತಮ್ಮ ಹೆಸರನ್ನು ನೋಂದಾಯಿಸಲು ಮೊಬೈಲ್ ಸಂಖ್ಯೆ 98869 40339 ಸಂಪರ್ಕಿಸುವಂತೆ ಪ್ರತಿಷ್ಠಾನದ ಅಧ್ಯಕ್ಷ ಜಿ.ಪ್ರಕಾಶ್ ಪ್ರಕಟಿಸಿದ್ದಾರೆ.

## ಕಂಪ್ಲಿ ಪೊಲೀಸ್ ಇಲಾಖೆಯಿಂದ ಈದ್ ಮಿಲಾದ್ ಹಾಗೂ ಗಣೇಶ ಹಬ್ಬದ ಪ್ರಯುಕ್ತ ಶಾಂತಿ ಸಭೆ

**ನೈಜ್ಯ ದೆಸೆ ನ್ಯೂಸ್**

**ಬಳ್ಳಾರಿ / ಕಂಪ್ಲಿ: ಈದ್ ಮಿಲಾದ್ ಹಾಗೂ ಗಣೇಶ ಹಬ್ಬದ ಪ್ರಯುಕ್ತ ಶಾಂತಿ ಹಾಗೂ ಸೌಹಾರ್ದಯುತವಾಗಿ ಹಬ್ಬಗಳನ್ನು ಆಚರಿಸಬೇಕು ಎಂದು ಡಿವೈಎಸ್‌ಪಿ ಪ್ರಸಾದ್ ಗೋಖಲೆ ಕರೆ ನೀಡಿದ್ದಾರೆ.**

ಈದ್ ಮಿಲಾದ್ ಹಾಗೂ ಗಣೇಶ ಹಬ್ಬದ ಅಂಗವಾಗಿ ಪಟ್ಟಣದ ಪೊಲೀಸ್ ಠಾಣೆ ಸಭಾಂಗಣದಲ್ಲಿ ಶುಕ್ರವಾರ ನಡೆದ ಶಾಂತಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. ಹಿಂದೂಗಳಿಗೆ ಗಣೇಶ ಹಬ್ಬ ಹಾಗೂ ಮುಸ್ಲಿಂ ಸಮುದಾಯದವರಿಗೆ ಈದ್ ಮಿಲಾದ್ ಪವಿತ್ರ ಹಬ್ಬಗಳಾಗಿವೆ. ಎರಡೂ ಹಬ್ಬಗಳನ್ನು ಸಂಭ್ರಮ, ಸಡಗರದಿಂದ ಆಚರಿಸಲಾಗುತ್ತದೆ. ಕಿಡಿಗೇಡಿಗಳು ಹರಡುವ ವದಂತಿಗಳಿಗೆ ಕಿವಿಗೊಡದೇ ಶಾಂತಿಯುತವಾಗಿ ಎಲ್ಲರೂ ಹಬ್ಬವನ್ನು ಆಚರಿಸಬೇಕು. ಗಣೇಶ ಮೂರ್ತಿ ಪ್ರತಿಷ್ಠಾಪನೆ ಹಾಗೂ ಈದ್ ಮಿಲಾದ್



ಮೆರವಣಿಗೆಗಳ ರೂಟ್ ಮ್ಯಾಪ್ ತಿಳಿಸಬೇಕು, ಪೊಲೀಸ್ ಠಾಣೆ ಧ್ವನಿವರ್ಧಕ ಹಬ್ಬಗಳ ಸಂದರ್ಭದಲ್ಲಿ ನಿಗದಿಪಡಿಸಿದ ಡೆಸಿಬಲ್ ಮೀರಿ ಅತಿಯಾದ ಶಬ್ದದ ಡಿಜೆ ಬಳಸುವುದನ್ನು ನಿಷೇಧಿಸಲಾಗಿರುತ್ತದೆ. ಕೋರ್ಟ್ ಮತ್ತು ಸರ್ಕಾರದ ನಿಯಮಾವಳಿಗಳನ್ನು ಪಾಲಿಸಬೇಕು. ವಾಟ್ಸಾಪ್, ಫೇಸ್‌ಬುಕ್ ಮುಂತಾದ ಸಾಮಾಜಿಕ ಜಾಲತಾಣಗಳಲ್ಲಿ ಬೇರೆ ಧರ್ಮೀಯರ ಭಾವನೆಗಳಿಗೆ ಧಕ್ಕೆ ತರುವಂತಹ ಅಥವಾ ಪ್ರಚೋದನಾಕಾರಿ ಪೋಸ್ಟ್‌ಗಳು ಹಾಗೂ ವೀಡಿಯೋಗಳನ್ನು ಹಂಚಿಕೊಳ್ಳಬಾರದು. ಎರಡೂ ಸಮುದಾಯಗಳ ಮುಖಂಡರು ಪರಸ್ಪರ ಸಹಕರಿಸಿ, ಯಾವುದೇ ಸಣ್ಣಪುಟ್ಟ ಗೊಂದಲಗಳಿದ್ದರೂ ಪೊಲೀಸರ ಗಮನಕ್ಕೆ ತಂದು ಶಾಂತಿಯುತವಾಗಿ ಬಗೆಹರಿಸಿಕೊಳ್ಳಬೇಕು. ಯಾವುದೇ ಅಹಿತಕರ ಘಟನೆಗಳು ಕಂಡುಬಂದರೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಪಿಐ ವಾಸುಕುಮಾರ ಮಾತನಾಡಿ, ಮೆರವಣಿಗೆಯ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ನೋಡಿಕೊಳ್ಳಲು ಆಯಾ ಸಮಿತಿಗಳು ಸ್ವಯಂಸೇವಕರನ್ನು ನೇಮಿಸಬೇಕು. ಯಾವುದೇ ಘಟನೆ ನಡೆಯದಂತೆ ಪೊಲೀಸ್ ಇಲಾಖೆ ಸೂಕ್ತ ಕ್ರಮ ಕೈಗೊಳ್ಳಲಿದೆ. ಒಟ್ಟಾರೆ ಹಬ್ಬಗಳು ಶಾಂತಿ, ಸುವ್ಯವಸ್ಥಿತವಾಗಿ, ಸಾಮರಸ್ಯದಿಂದ ಆಚರಿಸಬೇಕೆಂಬುದು ಸಭೆಯ ಉದ್ದೇಶ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಹಿರಿಯರಾದ ಕೆ. ಎಂ. ಹೇಮಯ್ಯ ಸ್ವಾಮೀ, ಉಸ್ಮಾನ್, ಮಸ್ತನವಲಿ ಕಡಪ, ಬಿ. ಜಾಫರ್ ಸಾಧಿಕ್ , ಲೋಡ್ಡು ಅಬ್ದುಲ್ ಕರೀಂ, ಕೆ. ಮೆಹೆಬೂಬ್, ಉಡೇಗೋಳ್, ಚನ್ನಬಸಪ್ಪ, ವಿರೇಶ್, ಜಾಹಿರವುದ್ದಿನ್, ಮೌಲಾಹುಸೇನ್, ಕೋಟೆ ಶಬ್ಬೀರ್, ಗುರುರಾಜ್ ಸೇರಿದಂತೆ ಎಲ್ಲಾ ಸಮುದಾಯದ ಮುಖಂಡರು ಹಾಗೂ ವಿವಿಧ ಸಂಘಸಂಸ್ಥೆಗಳ ಮುಖಂಡರು ಸಭೆಯಲ್ಲಿ ಉಪಸ್ಥಿತರಿದ್ದರು.

# ಜಾಲಹಳ್ಳಿಯಲ್ಲಿ ಭೀಕರ ರಸ್ತೆ ಅಪಘಾತ: ಇಬ್ಬರು ವಿದ್ಯಾರ್ಥಿಗಳು ದುರ್ಮರಣ

## ಎರಡು ಕುಟುಂಬಗಳಿಗೆ ತಲಾ 25 ಲಕ್ಷ ಪರಿಹಾರ ನೀಡುವಂತೆ ಸರ್ಕಾರಕ್ಕೆ ಸಾರ್ವಜನಿಕರ ಒತ್ತಾಯ

**ನೈಜ್ಯ ದೆಸೆ ನ್ಯೂಸ್**

**ಜಾಲಹಳ್ಳಿ/ದೇವದುರ್ಗ, ಆ.21: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮದ ಜಾಲಹಳ್ಳಿ?ತಿಂತಿಣಿ ಬ್ರಿಡ್ಜ್ ಮುಖ್ಯ ರಸ್ತೆಯ ಜೆ.ಜೆ. ಕಲ್ಯಾಣ ಮಂಟಪದ ಬಳಿ ಗುರುವಾರ ರಾತ್ರಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಇಬ್ಬರು ವಿದ್ಯಾರ್ಥಿಗಳು ಮೃತಪಟ್ಟಿದ್ದು, ಎರಡು ಕುಟುಂಬಗಳು ಆಧಾರ ಸ್ತಂಭವಾಗಿದ್ದ ಯುವಕರನ್ನು ಕಳೆದುಕೊಂಡು ಶೋಕಸಾಗರದಲ್ಲಿ ಮುಳುಗಿವೆ.**

ಮೃತರನ್ನು ಜಾಲಹಳ್ಳಿ ಗ್ರಾಮದ ಎಸ್‌ಸಿ ಕಾಲೋನಿಯ ವಿಜಯ ನೀಲಕಂಠಪ್ಪ (18) ಹಾಗೂ ಕಬ್ಬೇರು ಓಣಿಯ ಜಿ. ಉದಯಕುಮಾರ್ ರಾಮಣ್ಣ (18) ಎಂದು ಗುರುತಿಸಲಾಗಿದೆ. ಇಬ್ಬರೂ ವಿದ್ಯಾರ್ಥಿಗಳಾಗಿದ್ದು, ಉದಯಕುಮಾರ್ ಅವರ ಹುಟ್ಟುಹಬ್ಬದ ದಿನವೇ ದುರಂತ ಸಂಭವಿಸಿರುವುದು ಕುಟುಂಬಸ್ಥರು ಹಾಗೂ ಗ್ರಾಮಸ್ಥರಲ್ಲಿ ಮತ್ತಷ್ಟು ದುಃಖ ಮೂಡಿಸಿದೆ. ಗುರುವಾರ (ಆ.20) ರಾತ್ರಿ ಸುಮಾರು 8.25ರ ವೇಳೆಗೆ ವಿಜಯ ಹಾಗೂ ಉದಯಕುಮಾರ್ ಅವರು ಏಂ–51 ಎಎ 4071 ಸಂಖ್ಯೆಯ ಬೈಕ್‌ನಲ್ಲಿ ತಿಂತಿಣಿ ಬ್ರಿಡ್ಜ್ ಕಡೆಗೆ ತೆರಳುತ್ತಿದ್ದರು. ಜೆ.ಜೆ. ಕಲ್ಯಾಣ ಮಂಟಪದ ಬಳಿ ಮುಂದೆ ಸಾಗುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್‌ನ್ನು ಓವರ್‌ಟೇಕ್ ಮಾಡಲು ಯತ್ನಿಸುತ್ತಿದ್ದಾಗ, ಎದುರಿನಿಂದ ಬಂದ ಏಂ–36 ಆ 3194 ಸಂಖ್ಯೆಯ ಆಟೋ ಬೈಕ್‌ಗೆ ಡಿಕ್ಕಿ ಹೊಡೆದಿದೆ ಎನ್ನಲಾಗಿದೆ.

ಡಿಕ್ಕಿಯ ರಭಸಕ್ಕೆ ಬೈಕ್‌ನಲ್ಲಿದ್ದ ಇಬ್ಬರೂ ರಸ್ತೆಗೆ ಬಿದ್ದಿದ್ದಾರೆ. ಇದೇ ವೇಳೆ ಹಿಂಬದಿಯಿಂದ ಬರುತ್ತಿದ್ದ ಏಂ–36 ಈ 1161 ಸಂಖ್ಯೆಯ ಕೆಎಸ್‌ಆರ್‌ಟಿಸಿ ಬಸ್ ನಿಯಂತ್ರಣ ತಪ್ಪಿ ಅವರ ಮೇಲೆ ಹರಿದಿದೆ. ತಲೆಗೆ ಗಂಭೀರ ಗಾಯಗೊಂಡ ವಿಜಯ ಸ್ಥಳದಲ್ಲೇ ಮೃತಪಟ್ಟರೆ, ತೀವ್ರವಾಗಿ ಗಾಯಗೊಂಡ ಉದಯಕುಮಾರ್ ಅವರನ್ನು ದೇವದುರ್ಗ ಆಸ್ಪತ್ರೆಗೆ ಕರೆದೊಯ್ಯುವಾಗ ಆಂಬುಲೆನ್ಸ್‌ನಲ್ಲೇ ಮೃತಪಟ್ಟಿದ್ದಾರೆ.

ಅಪಘಾತದಲ್ಲಿ ಆಟೋದಲ್ಲಿದ್ದ ಪ್ರಯಾಣಿಕರಾದ ಜಯಶ್ರೀ ಹಾಗೂ ಲಕ್ಷ್ಮಿ ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ತಿಳಿದುಬಂದಿದೆ. ಎರಡು ಕುಟುಂಬಗಳಿಗೆ ಪರಿಹಾರಕ್ಕೆ ಒತ್ತಾಯ ಅಪಘಾತದ ಸ್ಥಳದಲ್ಲಿ ಜಮಾಯಿಸಿದ್ದ ಸಾರ್ವಜನಿಕರು, ಪ್ರತಿದಿನ ಕಾಲೇಜಿಗೆ ತೆರಳುತ್ತಿದ್ದ ಇಬ್ಬರು ವಿದ್ಯಾರ್ಥಿಗಳು ಅಕಾಲಿಕವಾಗಿ ಮೃತಪಟ್ಟಿರುವುದರಿಂದ ಎರಡು ಕುಟುಂಬಗಳು ತೀವ್ರ ಸಂಕಷ್ಟಕ್ಕೆ ಸಿಲುಕಿವೆ ಎಂದು ಹೇಳಿದರು. ಮನೆಗೆ ಆಧಾರವಾಗಿದ್ದ ಯುವಕರನ್ನು ಕಳೆದುಕೊಂಡಿರುವ ಬಡ ಕುಟುಂಬಗಳಿಗೆ ಸರ್ಕಾರ ಕೂಡಲೇ ಸೂಕ್ತ ಆರ್ಥಿಕ ನೆರವು ನೀಡಬೇಕು ಎಂದು ಒತ್ತಾಯಿಸಿದರು.

ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಕುಟುಂಬಗಳ ನೆರವಿಗೆ ಧಾವಿಸಿ, ಸರ್ಕಾರದಿಂದ ಪರಿಹಾರ ದೊರಕಿಸುವಲ್ಲಿ ಪ್ರಮುಖ ಪಾತ್ರ ವಹಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದರು.

**ವಾಹನತಪಾಸಣೆ,** ಸಂಚಾರನಿಯಮ ಪಾಲನೆಗೆ ಆಗ್ರಹ ಜಾಲಹಳ್ಳಿ ಪೊಲೀಸ್ ಠಾಣೆಯ ಅಧಿಕಾರಿಗಳು ಗ್ರಾಮದಲ್ಲಿ ಸಂಚಾರ ನಿಯಮಗಳ ಕುರಿತು ಜಾಗೃತಿ ಮೂಡಿಸುವುದರ ಜೊತೆಗೆ, ಮನಬಂದಂತೆ ದ್ವಿಚಕ್ರ ವಾಹನ ಚಲಾಯಿಸುವ ಯುವಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು



**ತಲಾ 25 ಲಕ್ಷ ಪರಿಹಾರಕ್ಕೆ ಒತ್ತಾಯ**

**ಅಪಘಾತದಲ್ಲಿ ಮೃತಪಟ್ಟ ಇಬ್ಬರು ವಿದ್ಯಾರ್ಥಿಗಳ ಕುಟುಂಬಗಳು ಬಡವಾಗಿದ್ದು, ಯುವಕರೇ ಕುಟುಂಬಕ್ಕೆ ಆಧಾರವಾಗಿದ್ದರು. ಸರ್ಕಾರ ಮಾನವೀಯತೆ ದೃಷ್ಟಿಯಿಂದ ಕೂಡಲೇ ಎರಡೂ ಕುಟುಂಬಗಳಿಗೆ ತಲಾ 25 ಲಕ್ಷ ಪರಿಹಾರ ನೀಡಬೇಕು ಎಂದು ಮುಖಂಡ ಭೂತಪ್ಪ ದೇವರುಮನೆ ಒತ್ತಾಯಿಸಿದರು.**

ಎಂದು ಸಾರ್ವಜನಿಕರು ಒತ್ತಾಯಿಸಿದರು.

ದ್ವಿಚಕ್ರ ವಾಹನಗಳ ಚಾಲನಾ ಪರವಾನಗಿ, ವಿಮೆ ಹಾಗೂ ವಾಹನದ ದಾಖಲೆಗಳನ್ನು ಕಡ್ಡಾಯವಾಗಿ ಪರಿಶೀಲಿಸಬೇಕು. ದಾಖಲೆಗಳಿಲ್ಲದೆ ಅಥವಾ ಪರವಾನಗಿ ಇಲ್ಲದೆ ವಾಹನ ಚಲಾಯಿಸುವವರ ವಿರುದ್ಧ ನಿಯಮಾನುಸಾರ ದಂಡ ವಿಧಿಸಬೇಕು. ಹೆಲ್ಮೆಟ್ ಧರಿಸುವುದನ್ನು ಕಡ್ಡಾಯವಾಗಿ ಪಾಲಿಸುವಂತೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

18 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ದ್ವಿಚಕ್ರ ವಾಹನ ಚಲಾಯಿಸುವುದನ್ನು ತಡೆಯಲು ಪೊಲೀಸರು ವಿಶೇಷ ತಪಾಸಣೆ ನಡೆಸಬೇಕು.

**ಮುಖಂಡ ರಂಗಪ್ಪ ತೊಗರಿ ಮಾತನಾಡಿ, "ಅಪಘಾತದಲ್ಲಿ ಮೃತಪಟ್ಟ ಇಬ್ಬರು ಯುವಕರ ಕುಟುಂಬಗಳು ಬಡವಾಗಿದ್ದು, ಸರ್ಕಾರ ಕೂಡಲೇ ತಲಾ 25 ಲಕ್ಷ ಪರಿಹಾರ ನೀಡಬೇಕು" ಎಂದು ಒತ್ತಾಯಿಸಿದರು.**



**ಏಏಖಖಅ ಅಧಿಕಾರಿ ಗಳಿಂದ ಅಂತ್ಯ ಸಂಸ್ಕಾರಕ್ಕಾಗಿ 25000/–ರೂಪಾಯಿ ಪರಿಹಾರ ದನ ನೀಡಲಾಯಿತು**

ಗ್ರಾಮದಲ್ಲಿ ಸಂಚರಿಸುವ ಯಮಹಾ–100 ಸೇರಿದಂತೆ ದ್ವಿಚಕ್ರ ವಾಹನಗಳ ದಾಖಲಾತಿಗಳನ್ನು ಪರಿಶೀಲಿಸಬೇಕು ಎಂದು ಡಿವೈಎಫ್‌ಐ ಮುಖಂಡ ರಿಯಾಜ್ ಆರ್ಶಿ ಒತ್ತಾಯಿಸಿದರು. ಕುಮಾರ ಚಪ್ಪಳಕಿ ಮಾತನಾಡಿ, ಯುವಕರು ಸಂಚಾರ ನಿಯಮಗಳನ್ನು ಪಾಲಿಸುವಂತೆ ಪೊಲೀಸರು ಜಾಗೃತಿ ಮೂಡಿಸಬೇಕು ಹಾಗೂ ವಾಹನಗಳ ದಾಖಲೆಗಳನ್ನು ಪರಿಶೀಲಿಸಬೇಕು ಎಂದು ಹೇಳಿದರು.

**ರಮೇಶ್ ಆನ್ವರಿ ಮಾತನಾಡಿ,** ಅಪಘಾತದಲ್ಲಿ ಮೃತಪಟ್ಟ ಇಬ್ಬರು ಯುವಕರ ಕುಟುಂಬಗಳಿಗೆ ಸರ್ಕಾರ ಸೂಕ್ತ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು. ಅಪಘಾತಗಳು ಮರುಕಳಿಸದಂತೆ ಜಾಲಹಳ್ಳಿ ಪೊಲೀಸ್ ಇಲಾಖೆ ಕೂಡಲೇ ಎಚ್ಚೆತ್ತುಕೊಂಡು ಸಂಚಾರ ನಿಯಮಗಳ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಯುವಕರ ದ್ವಿಚಕ್ರ ವಾಹನಗಳ ಪರವಾನಗಿ, ವಿಮೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ, ನಿಯಮ ಉಲ್ಲಂಘಿಸುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಆಗ್ರಹಿಸಿದರು.

**ಪ್ರಕರಣ ದಾಖಲು** ಮೃತ ವಿಜಯ ಅವರ ತಂದೆ ನೀಲಕಂಠಪ್ಪ ನೀಡಿದ ದೂರಿನ ಮೇರೆಗೆ ಆಟೋ ಚಾಲಕ ಜಯಪ್ರಕಾಶ ಹಾಗೂ ಕೆಎಸ್‌ಆರ್‌ಟಿಸಿ ಬಸ್ ಚಾಲಕ ನಾಗಪ್ಪ ವಿರುದ್ಧ ಜಾಲಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

**ಸಾರಿಗೆ ಇಲಾಖೆ ಅಧಿಕಾರಿಗಳಿಂದ ನೆರವು**

ಅಪಘಾತದ ವಿಷಯ ತಿಳಿದು ಸಾರಿಗೆ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ಮೃತರ ಕುಟುಂಬಗಳಿಗೆ ಸಾಂತ್ವನ ಹೇಳಿದರು. ಅಂತ್ಯಸಂಸ್ಕಾರಕ್ಕಾಗಿ ಎರಡೂ ಕುಟುಂಬಗಳಿಗೆ ತಲಾ 25,000 ನೆರವು ನೀಡಿದರು ಎಂದು ತಿಳಿದುಬಂದಿದೆ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101